(ಆ) ಬೆಳಗಾವಿಯಲ್ಲಿ ನಡೆದ 70ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ನಿರ್ಣಯಗಳ ಬಗ್ಗೆ

+ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :- ಮಾನ್ಯ ಅಧ್ಯಕ್ಷರೆ, ನಿನ್ನೆ ಬೆಳಗಾವಿಯಲ್ಲಿ 70ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಿ ಜರುಗಿ ಮುಕ್ತಾಯಗೊಂಡಿತು. ಸದರಿ ಸಮ್ಮೇಳನದಲ್ಲಿ ಭಾಗವಹಿಸುವ ಸಂಬಂಧ ತಾವು ಈ ಸದನಕ್ಕೆ ರಜೆ ಕೊಟ್ಟು ಪಾಲ್ಗೊಳ್ಳುವುದಕ್ಕೆ ಸದವಕಾಶ ಕಲ್ಪಿಸಿದ್ದೀರಿ. ನಾನೂ ಸಹ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದೆ ಸಮ್ಮೇಳನ ಬಹಳ ಯಶಸ್ವಿಯಾಗಿ ನಡೆದಿದೆ. ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಸಾಹಿತ್ಯ ಸಮ್ಮೇಳನ ಅಧ್ಯಕ್ಷರನ್ನು ಈ ಸಂದರ್ಭದಲ್ಲಿ ಸದನ ಅಭಿನಂದಿಸಬೇಕಾದುದು ಔಚಿತ್ಯಪೂರ್ಣವಾದುದೆಂದು ನಾನು ಭಾವಿಸುತ್ತೇನೆ. ಇದಕ್ಕೆ ತಾವೂ ಸಹ ನಮ್ಮ ಜೊತೆಯಲ್ಲಿ ದನಿಗೂಡಿಸಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಪಾಟೀಲ ಪುಟ್ಟಪ್ಪನವರನ್ನು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಹರಿಕೃಷ್ಣ ಪುನರೂರು ಅವರಿಗೆ ಅಭಿನಂದನೆಗಳನ್ನು ಈ ಸದನದ ಮೂಲಕ ಕಳುಹಿಸಿಕೊಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಎರಡನೆಯದಾಗಿ, ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾದ ಮಾನ್ಯ ಮಂತ್ರಿಗಳಾದ ಕೌಜಲಗಿಯವರು ಹಾಗೂ ವಿಧಾನ ಪರಿಷತ್ತಿನ ಸದಸ್ಯರಾದ ಮಾನ್ಯ ಪ್ರಭಾಕರ ಕೋರೆಯವರು, ಬೆಳಗಾವಿ ಜಿಲ್ಲೆಯ ಶಾಸಕರುಗಳು ಸಾರ್ವಜನಿಕರು, ಸಂಘ-ಸಂಸ್ಥೆಗಳ ಸಹಕಾರದಿಂದಾಗಿ ಐತಿಹಾಸಿಕವೆನಿಸಿದ ಸಮಾವೇಶವನ್ನು ಗಡಿನಾಡಿನ ಪ್ರದೇಶದಲ್ಲಿ ಯಶಸ್ವಿಯಾಗಿ ನೆರವೇರಿಸಿರುವುದು ನಮ್ಮೆಲ್ಲರಿಗೂ ಬಹಳ ಅಭಿಮಾನ ತಂದಿದೆ. ಇದರ ಬಗ್ಗೆ ಹರ್ಷ ವ್ಯಕ್ತಪಡಿಸಿರುವುದಕ್ಕೆ ಈ ಸಂದರ್ಭದಲ್ಲಿ ಸದನದ ಸಮಯವನ್ನು ಉಪಯೋಗಿಸಿಕೊಳ್ಳುತ್ತಿದ್ದೇನೆ. ಬಹಳ ಮುಖ್ಯವಾಗಿ ಮಾನ್ಯ ಮಂತ್ರಿಗಳಾದ ಕೌಜಲಗಿಯವರನ್ನು ಮತ್ತು ವಿಧಾನ ಪರಿಷತ್ ಸದಸ್ಯರಾದ ಪ್ರಭಾಕರ ಕೋರೆಯವರನ್ನು ಈ ಸಂದರ್ಭದಲ್ಲಿ ಅಭಿನಂದಿಸಲಿಚ್ಚಿಸುತ್ತೇನೆ. ಅವರು ಸಮಾವೇಶವನ್ನು ಬಹಳ ಅಚ್ಚುಕಟ್ಟಾಗಿ, ಯಶಸ್ವಿಯಾಗಿ ನಿರ್ವಹಿಸಿದ್ದಾರೆ. ಮಾನ್ಯ ದರ್ಮಸಿಂಗ್‌ರವರಲ್ಲಿ ಒಂದೆರಡು ಬಹಳ ಪ್ರಮುಖವಾದ ವಿಚಾರಗಳನ್ನು ಕೇಳಬೇಕಾಗುತ್ತದೆ. ಸಾಹಿತ್ಯ ಸಮ್ಮೇಳನಗಳು ಕೇವಲ ಜನಸಂದಣಿಯ ಒಂದು ಜಾತ್ರೆಯಲ್ಲ. ಸಮ್ಮೇಳನದಲ್ಲಿ ಕೈಗೊಳ್ಳುವ ತೀರ್ಮಾನಗಳು, ಬಹಳ ಮಹತ್ತರವಾದವುಗಳು. ಅವು ರಾಜ್ಯದ ಬೆಳವಣಿಗೆ ಮತ್ತು ಅಭಿವೃದ್ಧಿ ದೃಷ್ಟಿಯಿಂದ ಅಮೂಲಾಗ್ರವಾಗಿ ಯೋಚನೆ ಮಾಡಿ ಕೈಗೊಂಡಿರುವ ಕೆಲವು ತೀರ್ಮಾನಗಳಾಗಿವೆ. ಈ ಸಲ ಮಹಾರಾಷ್ಟ್ರದ ಎಲ್ಲಾ ಪಕ್ಷಗಳ ಸದಸ್ಯರೆಲ್ಲರೂ ಸೇರಿ ಸುಪ್ರಿಂ ಕೋರ್ಟಿಗೆ ಹೋಗಿರುವುದರಿಂದ ಗಡಿ ವಿವಾದದ ವಿಚಾರದಲ್ಲಿ ಸರ್ಕಾರ ಬಹಳ ಎಚ್ಚರಿಕೆಯಿಂದ ಮೈಯೆಲ್ಲಾ ಕಣ್ಣಾಗಿಸಿಕೊಂಡು ಕಾಯಬೇಕಾಗುತ್ತದೆ. ಮಹಾಜನ್ ವರದಿ ಬಗ್ಗೆ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಮತ್ತು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಹೇಳಿರುವ ವಿಚಾರಗಳಿಗೆ ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಂಪೂರ್ಣ ಬೆಂಬಲ ಘೋಷಿಸಿದ್ದಾರೆ. "ಅಗತ್ಯ ಬಿದ್ದಲ್ಲಿ ಹೋರಾಟ ಮಾಡತಕ್ಕಂಥ ಅವಶ್ಯಕತೆಯಿದೆ, ನಾವು ಮಾಡುತ್ತೇವೆ" ಎಂದು ಹೇಳಿದ್ದಾರೆ. ಅವರ ನಿಲುವನ್ನು ನಾವು ಸಮರ್ಥಿಸುತ್ತೇವೆ. ಇದೇ ಸಂದರ್ಭದಲ್ಲಿ ನಿನ್ನೆ ದಿವಸ ಸಾಹಿತ್ಯ ಸಮ್ಮೇಳನದಲ್ಲಿ ಮೂರ್ನಾಲ್ಕು ನಿರ್ಣಯಗಳನ್ನು ಕೈಗೊಂಡಿದ್ದಾರೆ. ಅದರಲ್ಲಿ ಬಹಳ ಪ್ರಮುಖವಾದ ಒಂದು ನಿರ್ಣಯ, ಮಕ್ಕಳ ಸಾಹಿತ್ಯ ಅಕಾಡೆಮಿಯನ್ನು ರಚಿಸುವುದು. ಆದರೆ, ಅಸ್ತಿತ್ವದಲ್ಲಿರುವ ಉರ್ದು ಸಾಹಿತ್ಯ ಅಕಾಡೆಮಿ ಏನೇನೂ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಳ್ಳದಿರುವುದರಿಂದ ಅದನ್ನು ಬಂದ್ ಮಾಡಬೇಕೆಂದು

ನಿರ್ಣಯ ಕೈಗೊಳ್ಳಲಾಗಿದೆ. ಅದೇ ರೀತಿ ವಿಶ್ವ ಕನ್ನಡ ಸಮ್ಮೇಳನ ನಡೆಸಬೇಕೆಂದು ಶ್ರೀಮಾನ್ ಗುಂಡೂರಾವ್‌ರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ತೀರ್ಮಾನ ಕೈಗೊಂಡಿದ್ದರು. ಆದರೆ, ಆ ಸಮ್ಮೇಳನವನ್ನು ನಡೆಸುವುದಕ್ಕಾಗಲಿಲ್ಲ. ಪಾಪ ಅವರು ಅಧಿಕಾರ ಕಳೆದುಕೊಂಡರು ಅದಾದ ನಂತರ ರಾಮಕೃಷ್ಣ ಹೆಗಡೆಯವರ ನಾಯಕತ್ವದಲ್ಲಿ ಬಹಳ ಯಶಸ್ವಿಯಾಗಿ ನಡೆಸಲಾಯಿತು. 1984ರಲ್ಲಿ ಗುಂಡೂರಾವ್‌ರವರು ತೆಗೆದುಕೊಂಡ ನಿರ್ಧಾರ ಮತ್ತು ಅದಕ್ಕೆ ಅವರು ಅನೇಕ ತಯಾರಿಗಳನ್ನು ನಡೆಸಿದ್ದರು. ಅದನ್ನು ಕಾರ್ಯಗತಗೊಳಿಸುವಂಥ ಅವಕಾಶ ನಮ್ಮ ಸರ್ಕಾರದ ಪಾಲಿಗೆ ಸಿಕ್ಕಿತ್ತು. ಮತ್ತೊಮ್ಮೆ ವಿಶ್ವ ಕನ್ನಡ ಸಮ್ಮೇಳನವನ್ನು 2004ರಲ್ಲಿ ಬೆಂಗಳೂರಿನಲ್ಲಿ ನಡೆಸಬೇಕೆಂಬ ತೀರ್ಮಾನವನ್ನು ಸಾಹಿತ್ಯ ಸಮ್ಮೇಳನ ಕೈಗೊಂಡಿದೆ. ಇದರ ಬಗ್ಗೆ ಸರ್ಕಾರ ನಿಲುವೇನು ಎಂಬುದು ನಮಗೆ ಗೊತ್ತಾಗಬೇಕು. ಇದು ಬಹಳ ಪ್ರಮುಖವಾದುದು. ಇನ್ನು ಬಹಳ ಮುಖ್ಯವಾದುದು ಏನೆಂದರೆ, ಸಮ್ಮೇಳನದಲ್ಲಿ ಡಾ।। ಡಿ.ಎಂ. ನಂಜುಂಡಪ್ಪನವರ ವರದಿ ಬಗ್ಗೆ ಬಹಳ ಚರ್ಚೆಯಾಯಿತು. ರಾಜ್ಯದಲ್ಲಿನ ಪ್ರಾದೇಶಿಕ ಅಸಮತೋಲನವೇನಿದೆ, ಮತ್ತು ಉತ್ತರ ಕರ್ನಾಟಕದಲ್ಲಿ ಬೀದರ್ ಗುಲ್ಬರ್ಗ, ರಾಯಚೂರು, ಬಳ್ಳಾರಿ, ಬೆಳಗಾವಿ, ಬಿಜಾಪುರ, ಬಾಗಲಕೋಟೆ, ಧಾರವಾಡ, ಗದಗ, ಹಾವೇರಿ ಮತ್ತು ಕಾರವಾರ ಇರಬಹುದು, ಈ ಬಾಗದಲ್ಲಿ ಕೆಲವು ನಾಯಕರುಗಳು ಬಹಳಷ್ಟು ವರ್ಷಗಳಿಂದ ಅಭಿವೃದ್ಧಿ ಕೆಲಸ ಕಾರ್ಯಗಳೆಲ್ಲವೂ ಕುಂಠಿತಗೊಂಡಿವೆ ಎನ್ನುವ ದೃಷ್ಟಿಯಿಂದ ಪ್ರಾದೇಶಿಕ ಅಸಮತೋಲನ ನಿವಾರಣೆಯಾಗಬೇಕೆಂದು ಹೋರಾಟ ಮಾಡಿಕೊಂಡು 'ಪ್ರತ್ಯೇಕತೆ'ಯ ಮಾತನ್ನು ಹೇಳುತ್ತಿದ್ದಾರೆ. ಇಂತಹ ಸನ್ನಿವೇಶದಲ್ಲಿ ಡಾ।। ನಂಜುಂಡಪ್ಪನವರ ವರದಿಯಂತೆ ಸುಮಾರು ಎಂಟು ಸಾವಿರ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೆ ಮೂರ್ನಾಲ್ಕು ವರ್ಷಗಳಲ್ಲಿ ಕರ್ನಾಟಕದಲ್ಲಿ ಅಸಮತೋಲನ ನಿವಾರಣೆಯಾಗುತ್ತದೆಂಬ ಮಾತನ್ನು ಹೇಳಿದ್ದಾರೆ. ಸಾಹಿತ್ಯ ಸಮ್ಮೇಳನದವರು ಈಗ ಏನು ಹೇಳಿದ್ದಾರೆಂದರೆ, ಈ ತಿಂಗಳ 21ನೇ ತಾರೀಖಿನಂದು ಮಾನ್ಯ ಮುಖ್ಯಮಂತ್ರಿಗಳು ಮಂಡಿಸುವ ಬಜೆಟ್‌ನಲ್ಲಿ ಡಾ।। ನಂಜುಂಡಪ್ಪನವರ ವರದಿಯನ್ನು ಅನುಷ್ಠಾನಗೊಳಿಸುವುದಕ್ಕೆ ಸ್ವಲ್ಪವಾದರೂ ಹಣವನ್ನು ಕೊಡಬೇಕೆಂಬುದು. ಯಾವ್ಯಾವುದಕ್ಕೋ ಹಣ ತರುತ್ತಿದ್ದಾರೆ, ನಬಾರ್ಡ್, ವಿಶ್ವ ಬ್ಯಾಂಕ್ ಮತ್ತು ಅನೇಕ ಜಾಗತಿಕ ಬ್ಯಾಂಕುಗಳಿಂದ ಸಾಲ ತರುತ್ತಿದ್ದಾರೆ, ಇದಕ್ಕೂ ಸಹ ಸಾಲ ತೆಗೆದುಕೊಂಡರೆ ಇದೊಂದು ಸಂಪೂರ್ಣವಾದ ಕನ್ನಡದ, ಕರ್ನಾಟಕದ ಐಕ್ಯತೆ ಮತ್ತು ಭಾವನೆಯ ದೃಷ್ಟಿಯಿಂದ ಇದು ಅಭಿವೃದ್ಧಿಯಾಗುತ್ತದೆಂಬುದು ನಮ್ಮ ಅಭಿಪ್ರಾಯ ಮತ್ತು ಇದರ ಬಗ್ಗೆ ಸರ್ಕಾರದ ನಿಲುವು ಏನೆಂಬುದು ಸಹ ನಮಗೆ ಗೊತ್ತಾಗುತ್ತದೆ. ಕೊನೆಯದಾಗಿ, ವಿಧಾನಸಭೆಗೆ ಸಂಬಂಧಿಸಿದಂತೆ ಮತ್ತೊಂದು ತೀರ್ಮಾನ ಕೈಗೊಂಡಿದ್ದರೆ. ಆ ತೀರ್ಮಾನವನ್ನು ನಾನು ಸ್ವಾಗತಿಸುತ್ತೇನೆ. ಏನೆಂದರೆ, ಬೆಳಗಾವಿಯಲ್ಲಿ ವಿಧಾನಸಭೆಯ ಚಳಿಗಾಲದ ಅಧಿವೇಶನ ನಡೆಯಬೇಕೆಂಬ ಮಾತನ್ನು ಹೇಳಿದ್ದಾರೆ. ಮಹಾರಾಷ್ಟ್ರದಲ್ಲಿ ಪ್ರತಿ ವರ್ಷವೂ ಆ ರೀತಿಯ ಅಧಿವೇಶನ ನಡೆಯುತ್ತಿದೆ. ಆ ರಾಜ್ಯದ ಮುಂಬಯಿ ಮತ್ತು ನಾಗಪುರದಲ್ಲಿ ಪ್ರತಿ ವರ್ಷವೂ ಹತ್ತು ದಿವಸಗಳ ಕಾಲ ಅಧಿವೇಶನವನ್ನು ನಡೆಸುತ್ತಾರೆ. ಅಂತಹುದೇ ಒಂದು ಅಧಿವೇಶನವನ್ನು ಬೆಳಗಾವಿಯಲ್ಲಿ ನಡೆಸಬೇಕೆಂದು ಮಾನ್ಯ ಪಾಟೀಲ ಪುಟ್ಟಪ್ಪನವರು ತಮ್ಮ ಅಧ್ಯಕ್ಷೀಯ ಭಾಷಣದಲ್ಲಿ ಹೇಳಿದರು, ಪಾಟೀಲ್ ಪುಟ್ಟಪ್ಪನವರು ಕನ್ನಡಕ್ಕಾಗಿ ಬಹಳ ಹಿಂದಿನಿಂದಲೂ ಹೋರಾಟ ಮಾಡಿಕೊಂಡು ಬಂದಿರುವವರು ಅವರು ಏನು ಹೇಳಿದರೆಂದರೆ "ಮೈರಣಿಗೆಯ ಉರಿ ಬಿಸಿಲಿನಲ್ಲಿ

ನಾನು ಭಾಗವಹಿಸಿದೆ, ಅನೇಕ ಮರಾಠಿ ಬೋರ್ಡ್‌ಗಳನ್ನು ತೆಗೆದುಹಾಕಿ ಕನ್ನಡದಲ್ಲಿ ಬೋರ್ಡ್ ಹಾಕಿರುವುದನ್ನು ನಾನು ನೋಡುತ್ತೇನೆ. ಮತ್ತು ಬೆಳಗಾವಿ ನಗರಸಭೆಯಲ್ಲೂ ಸಹ ಮರಾಠಿಯಲ್ಲಿರುವ ಬೋರ್ಡನ್ನು ತೆಗೆದು ಕನ್ನಡ ಬೋರ್ಡ್ ಹಾಕಿದ್ದಾರೆ" ಎಂದು ಹೇಳಿದರು. ಅಷ್ಟೇ ಅಲ್ಲದೆ, ಅವರು ಒಂದು ಮಾತನ್ನು ಹೇಳಿದರು. ಅದು ಯಾರನ್ನು ಉದ್ದೇಶಿಸಿ ಆ ಮಾತನ್ನು ಹೇಳಿದರೆಂಬುದು ನನಗೆ ಗೊತ್ತಿಲ್ಲ. ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀಮತಿ ರಾಣೆ ಸತೀಶ್‌ರವರೂ ಸಹ ಆ ಸಮ್ಮೇಳನದಲ್ಲಿದ್ದರು. ಪಾಟೀಲ ಪುಟ್ಟಪ್ಪನವರು ಏನು ಹೇಳಿದರು ಎಂದರೆ, ಇಲ್ಲಿ ಮರಾಠಿ ಭಾಷೆಯ ಒಂದು ಶಾಲೆ ನಡೆಯುತ್ತಿದೆ. ಅದರ ಕಟ್ಟಡ ಎಷ್ಟೊಂದು ಸುಂದರವಾಗಿದೆ. ಆದರೆ, ಕನ್ನಡ ಶಾಲೆಯ ಕಟ್ಟಡ ಕುಸಿದು ಬೀಳುತ್ತಿದೆ. ಇದನ್ನು ಕಟ್ಟಿಸಬೇಕು" ಎಂದು ಸಚಿವರೊಬ್ಬರಿಗೆ ಹೇಳಿದಾಗ ಸಚಿವರು "ಅದು ಹಾಗೆಯೇ" ಎಂದರಂತೆ ಸಚಿವ ಸಂಪುಟದಲ್ಲಿರುವ ಮಂತ್ರಿಗಳೊಬ್ಬರು ತಮಗೆ ಈ ಮಾತನ್ನು ಹೇಳಿದರೆಂದು ಪಾಟೀಲ ಪುಟ್ಟಪ್ಪನವರು ಸಮ್ಮೇಳನದಲ್ಲಿ ಹೇಳಿದರು. ಅವರು ಯಾವ ಮಂತ್ರಿಗಳು, ಏನು ಇತ್ಯಾದಿಯಾಗಿ ನಾನು ಖಾಸಗಿಯಾಗಿ ಮುಖ್ಯಮಂತ್ರಿಗಳಿಗೆ ತಿಳಿಸುವುದಾಗಿ ಹೇಳಿದ್ದಾರೆ. ಈ ರೀತಿಯ ಮಂತ್ರಿಗಳಿದ್ದರೆ ಅವರು ತಮ್ಮ ಧೋರಣೆಯನ್ನು ಬದಲಾಯಿಸಿಕೊಳ್ಳಬೇಕು. ಅವರನ್ನು ಸಚಿವ ಸಂಪುಟದಿಂದ ಸ್ವಲ್ಪ ದಿವಸ ಮನೆಗೆ ಕಳುಹಿಸಬೇಕೆಂಬುದು ನನ್ನ ಅಭಿಪ್ರಾಯ. ಅದನ್ನೇ ಇರಲಿ. ಸಮ್ಮೇಳನ ಯಶಸ್ವಿಯಾಗಿ ನಡೆದಿರುವ ಹಿನ್ನೆಲೆಯಲ್ಲಿ ಈ ಕುರಿತ ವಿಶೇಷವಾದ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಸಾಹಿತ್ಯ ಸಮ್ಮೇಳನದ ಎಲ್ಲಾ ತೀರ್ಮಾನ, ನಿರ್ಣಯಗಳಿಗೆ ನಮ್ಮೆಲ್ಲರ ಸಮ್ಮತಿ ಇದೆ. ತಾವು ಅದಕ್ಕಾಗಿ ಅವರಿಗೆ ಅಭಿನಂದನೆಗಳನ್ನು ಕಳುಹಿಸಬೇಕೆಂದು ತಮ್ಮಲ್ಲಿ ವಿನಂತಿಸಿಕೊಂಡು, ಈ ವಿಚಾರಗಳ ಬಗ್ಗೆ ಸರ್ಕಾರವು ತನ್ನ ಧೋರಣೆ ಏನು ಎನ್ನುವುದನ್ನು ತಿಳಿಸಬೇಕು. ಅಲ್ಲದೆ, ವಿಶೇಷವಾಗಿ ಅಧಿವೇಶನ ಮತ್ತು ಡಾ|| ನಂಜುಂಡಪ್ಪನವರ ವರದಿ ಬಗ್ಗೆಯೂ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ. ಸಮ್ಮೇಳನದಲ್ಲಿ ಇಂತಹ ಒಂದು ಮಹತ್ತರವಾದ ವಿಚಾರವನ್ನು ಪ್ರಸ್ತಾಪಿಸಿದ್ದಾರೆ. ಸಮ್ಮೇಳನದಲ್ಲಿ ಲಕ್ಷಾಂತರ ಜನರು ಭಾಗವಹಿಸಿದ್ದಾರೆ, ನಮ್ಮ ರಾಜ್ಯ ರಾಷ್ಟ್ರದ ವಿವಿಧ ಮೂಲೆಗಳಿಂದ ಹಾಗೂ ವಿದೇಶಗಳಿಂದಲೂ ಸಾವಿರಾರು ಜನ ಪ್ರತಿನಿಧಿಗಳು ಬಂದಿದ್ದಾರೆ. ಅಧಿವೇಶನ ನಡೆಯುತ್ತಿರುವ ಈ ಸಂದರ್ಭದಲ್ಲಿ ಇದಕ್ಕೆ ಮಹತ್ವ ಕೊಡುವುದಷ್ಟೇ ಅಲ್ಲ, ಅಲ್ಲಿ ಕೈಗೊಂಡಿರುವ ನಿರ್ಣಯಗಳಿಗೂ ಸಹ ಮಹತ್ವ ಕೊಡುವುದು ಸರಿಯೆಂದು ಅಭಿಪ್ರಾಯಪಡುತ್ತಾ, ಈ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ನನಗೆ ಅವಕಾಶ ಕಲ್ಪಿಸಿಕೊಟ್ಟಿರುವುದಕ್ಕೆ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ.

+ ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಸನ್ಯಾನ್ಯ ಅಧ್ಯಕ್ಷರೇ, ಮಾನ್ಯ ಸಿಂಧ್ಯರವರು ಡಾ|| ಪಾಟೀಲ ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಬೆಳಗಾವಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗಲು ಕಾರಣಕರ್ತರಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಮತ್ತು ಇತರ ಪ್ರಮುಖ ಸಂಘಟಕರನ್ನು ಅಭಿನಂದಿಸುವ ಸಲುವಾಗಿ ಏನೊಂದು ಸೂಚನೆಯನ್ನು ತಂದಿದ್ದಾರೋ, ಅದಕ್ಕೆ ನಾನೂ ಸಹ ನನ್ನ ಬೆಂಬಲವನ್ನು ಕೊಡುತ್ತಿದ್ದೇನೆ. ಈ ರೀತಿಯಾದಂತಹ ಸಾಹಿತ್ಯ ಸಮ್ಮೇಳನಗಳು ನಡೆದಂತಹ ಸಂದರ್ಭದಲ್ಲಿ ಸರ್ಕಾರ ಅಲ್ಲಿ ನಡೆಯುವಂತಹ ಕಾರ್ಯಕ್ರಮಗಳ ಬಗ್ಗೆ ಮತ್ತು ಅಲ್ಲಿ ತೆಗೆದುಕೊಳ್ಳುವಂತಹ ನಿರ್ಣಯಗಳ ಬಗ್ಗೆ ಗಂಭೀರವಾಗಿ ವಿಚಾರ ಮಾಡಬೇಕಾಗುತ್ತದೆ. ಕೇವಲ ಅಲ್ಲಿ ನಿರ್ಣಯಗಳಾಗಿ ಅದು ಅನುಷ್ಠಾನವಾಗದಿರುವಂತಹ ವ್ಯವಸ್ಥೆ ಜಾರಿಗೆ ಬಂದರೆ ಬಹುಶಃ ಆ ಸಾಹಿತ್ಯ ಸಮ್ಮೇಳನಗಳಿಗೆ

ಮತ್ತು ಆ ನಿರ್ಣಯಗಳಿಗೆ ಯಾವುದೇ ಸೂಕ್ತತೆ ಸಿಗಲಿಕ್ಕೆ ಸಾಧ್ಯವಿಲ್ಲ. ಸಾಹಿತ್ಯ ಸಮ್ಮೇಳನದಲ್ಲಿ ಹಲವಾರು ಪ್ರಮುಖವಾದ ನಿರ್ಣಯಗಳನ್ನು ಕೈಗೊಳ್ಳಲಾಗಿದೆ. ಪ್ರಮುಖವಾಗಿ ಮಾನ್ಯ ಡಾ।। ನಂಜುಂಡಪ್ಪನವರ ವರದಿಯ ಅನುಷ್ಠಾನಗೊಳಿಸಬೇಕೆಂಬ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ. ಅದನ್ನು ಸರ್ಕಾರ ಬಹಳ ಗಂಭೀರವಾಗಿ ತೆಗೆದುಕೊಳ್ಳಬೇಕು. ಡಾ।। ನಂಜುಂಡಪ್ಪನವರನ್ನು ಈ ಒಂದು ಪ್ರಾದೇಶಿಕ ಅಸಮಾನತೆಯ ಸಮಸ್ಯೆಯ ಪರಿಹಾರಕ್ಕಾಗಿ ನೇಮಕ ಮಾಡಿದಂತಹವರು ಇದೇ ಸರ್ಕಾರದವರೇ ಆಗಿದ್ದಾರೆ. ಅವರು ಬಹಳಷ್ಟು ಅಧ್ಯಯನ ಮಾಡಿ ಅಂಕಿ ಅಂಶಗಳೊಂದಿಗೆ ತಮ್ಮ ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದ್ದರಿಂದ ಸರ್ಕಾರ ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇದೇ ತಿಂಗಳ 21ನೇ ತಾರೀಖಿನಂದು ರಾಜ್ಯದ ಬಜೆಟ್ ಅನ್ನು ಮಂಡನೆ ಮಾಡಲಾಗುತ್ತಿದೆ. ಈ ಬಜೆಟ್‌ನಲ್ಲೇ ಡಾ।। ನಂಜುಂಡಪ್ಪನವರ ವರದಿ ಜಾರಿಗಾಗಿ ಹಣದ ವ್ಯವಸ್ಥೆಯನ್ನೂ ಸಹ ಸರ್ಕಾರ ಮಾಡಬೇಕು. ಪ್ರಾದೇಶಿಕ ಅಸಮಾನತೆಯನ್ನು ನೀಗಲಿಕ್ಕೆ ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡುವುದು ಇರಬಹುದು, ಶಿಕ್ಷಣ ರಂಗದ ಅಭಿವೃದ್ಧಿ ಇರಬಹುದು, ಆರೋಗ್ಯದ ದೃಷ್ಟಿಯಿಂದ ಇರಬಹುದು, ಮುಂತಾದ ವಿವಿಧ ರಂಗಗಳಿಗೆ ಸಂಬಂಧಿಸಿದಂತೆ ಡಾ।। ನಂಜುಂಡಪ್ಪನವರ ವರದಿ ಮಾಡಿರುವ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸಲು ಈ ಬಜೆಟ್‌ನಲ್ಲಿ ಅನುದಾನ ಒದಗಿಸಬೇಕೆನ್ನುವುದು ನನ್ನ ಮೊದಲನೆಯ ಬೇಡಿಕೆಯಾಗಿದೆ. ಇನ್ನೊಂದು ಪ್ರಮುಖವಾಗಿ ನಾನು ಇಲ್ಲಿ ಪ್ರಸ್ತಾಪ ಮಾಡಬಯಸುವುದೇನೆಂದರೆ, ಇವತ್ತು ಗಡಿ ಭಾಗದ ಪರಿಸ್ಥಿತಿ ಏನಾಗಿದೆ? ಬೇರೆ ಬೇರೆ ರಾಜ್ಯಗಳ ಗಡಿ ಭಾಗದಲ್ಲಿ ಇರತಕ್ಕಂಥ ನಮ್ಮ ಗ್ರಾಮಗಳು ಯಾವ ರೀತಿ ನಿರ್ಲಕ್ಷಕ್ಕೆ ಒಳಗಾಗಿವೆ ಎನ್ನುವುದು ಇವತ್ತು ನಮ್ಮ ಕಣ್ಣು ಮುಂದೆ ಇದೆ. ಅಥಣಿ ತಾಲ್ಲೂಕಿನ 22 ಗ್ರಾಮಗಳ ಗ್ರಾಮ ಪಂಚಾಯಿತಿ ಸದಸ್ಯರುಗಳು ಸೇರಿಕೊಂಡು 'ನಾವು ಈ ರಾಜ್ಯದಲ್ಲಿ ಇರುವುದು ಬೇಡ, ನಮಗೆ ಇಲ್ಲಿ ಏನೂ ಫೆಸಲಿಟೀಸ್ ಸಿಗುತ್ತಿಲ್ಲ. ನಾವು ಮಹಾರಾಷ್ಟ್ರಕ್ಕೆ ಸೇರಿಕೊಳ್ಳುತ್ತೇವೆ. ಅಲ್ಲಿ ಅಭಿವೃದ್ಧಿ ಕೆಲಸಗಳನ್ನು ಕೈಗೊಳ್ಳುತ್ತಿದ್ದಾರೆ 'ಎಂಬ ಒಂದು ರೆಸಲ್ಯೂಷನ್ ಅನ್ನು ಪಾಸ್ ಮಾಡಿದ್ದಾರೆ. ಈ ಬಾರಿಯ ಸಾಹಿತ್ಯ ಸಮ್ಮೇಳನದಲ್ಲೂ ಸಹ ಇದರ ಬಗ್ಗೆ ಚರ್ಚೆಯಾಗಿದೆ. ಗಡಿ ಭಾಗದ ಪ್ರದೇಶಗಳ ಬಗ್ಗೆ ಸರ್ಕಾರ ಹೆಚ್ಚು ಮುತುವರ್ಜಿ ವಹಿಸಿ ಅಭಿವೃದ್ಧಿ ಕೆಲಸ ಕಾರ್ಯಗಳನ್ನು ಅಲ್ಲಿ ಕೈಗೊಳ್ಳಬೇಕಾದಂತಹ ಅವಶ್ಯಕತೆ ಇಂದು ಬಹಳವಾಗಿದೆ. ಇದರ ಜೊತೆಗೆ ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಸಬೇಕು ಎಂಬ ಬಗ್ಗೆ ಸಾಹಿತ್ಯ ಸಮ್ಮೇಳನವು ನಿರ್ಣಯವೊಂದನ್ನು ಕೈಗೊಂಡಿದೆ. ರಾಜ್ಯದ ಬೇರೆ ಬೇರೆ ಭಾಗಗಳಲ್ಲಿ ಅಧಿವೇಶನ ನಡೆದರೆ ಮಾನಸಿಕವಾಗಿ ರಾಜ್ಯದ ಜನರನ್ನು ಒಂದುಗೂಡಿಸುವಂತಹ ಕೆಲಸ ಮಾಡಿದಂತಾಗುತ್ತದೆ. ಮತ್ತು ಪ್ರಾದೇಶಿಕ ಅಸಮತೋಲನವನ್ನು ನೀಗಲಿಕ್ಕೆ ಅದು ಪೂರಕವಾಗುತ್ತದೆ. ಮಹಾರಾಷ್ಟ್ರದಲ್ಲಿ ಈಗಾಗಲೇ ಎರಡು ಭಾಗಗಳಲ್ಲಿ ಈ ರೀತಿ ವಿಧಾನ ಮಂಡಲದ ಅಧಿವೇಶನಗಳನ್ನು ನಡೆಸಲಾಗುತ್ತಿದೆ. ಬೆಳಗಾವಿ, ಗುಲ್ಬರ್ಗಾ, ಬಿಜಾಪುರ ಮುಂತಾದ ಕಡೆಗಳಲ್ಲಿ ವಿಧಾನ ಮಂಡಲದ ಚಳಿಗಾಲದ ಅಧಿವೇಶನ ಅಥವಾ ಇತರ ಯಾವುದಾದರೂ ವಿಶೇಷ ಅಧಿವೇಶನಗಳು ನಡೆದಲ್ಲಿ ಇಡೀ ರಾಜ್ಯದ ಜನ ಸಾಮೂಹಿಕವಾಗಿ ಒಂದೇ ಎಂಬ ಭಾವನೆಯನ್ನು ಅವರಲ್ಲಿ ಬಿತ್ತಿದಂತಾಗುತ್ತದೆ. ಈ ರೀತಿ ಏನಾದರೂ ಆದರೆ, ಇಡೀ ರಾಜ್ಯದ ಜನ ಮಾನಸಿಕವಾಗಿ ಒಂದಾಗಿ ಬೆಸುಗೆ ಆಗುವಂತಹ ಸಂದರ್ಭ ಒದಗಿ ಬರುತ್ತದೆ. ಈ ಬೆಳವಣಿಗೆ ಆದಕ್ಕೆ ಪೂರಕ ಶಕ್ತಿಯಾಗಿ ಬೆಳಯಲಿಕ್ಕೆ ಸಾಧ್ಯವಿದೆ. ಸಾಹಿತ್ಯ

ಸಮ್ಮೇಳನದಲ್ಲಿ ಇನ್ನೂ ಕೆಲವೊಂದು ಪ್ರಮುಖವಾದ ರೆಸಲ್ಯೂಷನ್ ಆಗಿವೆ. ಡಾ।। ಪಾಟೀಲ್ ಪುಟ್ಟಪ್ಪನವರು ಬಹಳ ವಿಚಾರ ಪ್ರಚೋದಕವಾಗಿ ಹಲವಾರು ವಿಚಾರಗಳನ್ನು ಸಮ್ಮೇಳನದಲ್ಲಿ ಪ್ರಸ್ತಾಪ ಮಾಡಿದ್ದಾರೆ. ಕೆಲವೊಂದು ಅಸಂಗತವಾದಂತಹ ಘಟನೆಗಳೂ ಸಹ ಅಲ್ಲಿ ನಡೆದಿವೆ. ಆ ರೀತಿ ಆಗಬಾರದು. ನಾನು ಇಲ್ಲಿ ಪ್ರಮುಖವಾಗಿ ಪ್ರಸ್ತಾಪ ಮಾಡಬಯಸುವ ಮತ್ತೊಂದು ವಿಚಾರವೇನೆಂದರೆ, ಈ ಸಾಹಿತ್ಯ ಪರಿಷತ್ ನಿಜವಾಗಿ ಸಾಹಿತ್ಯ ಪರಿಷತ್ ಆಗಿ, ಅಲ್ಲಿ ಅದರ ಬಗ್ಗೆ ಹೆಚ್ಚು ಪೂರಕವಾಗಿ ಕೆಲಸ ಮಾಡಬೇಕಾಗಿದೆ. ಅಲ್ಲಿ ಏನಾಗಿದೆ ಎಂದರೆ, ಒಮ್ಮೊಮ್ಮೆ ಅದೊಂದು ರಾಜಕೀಯ ವ್ಯಕ್ತಿಗಳ ಒಂದು ಸಮಾವೇಶ ಆಗಿ ಬಿಡುತ್ತದೆ. ಅದು ತಪ್ಪಬೇಕು. ದಯವಿಟ್ಟು ಬರುವಂತಹ ದಿವಸಗಳಲ್ಲಿ ಅದು ಕೇವಲ ಸಾಹಿತಿಗಳ ಸಮ್ಮೇಳನವಾಗಬೇಕು. ಬಹುಶಃ ನೀವು ಉದ್ಘಾಟನೆಯ ಸಮಾರಂಭವನ್ನು ನೋಡಿದ್ದರೆ, ಅದೊಂದು ರಾಜಕೀಯ ಸಮ್ಮೇಳನ ಆದಂತೆ ಆಗಿ ಬಿಟ್ಟಿರುವುದು ಕಂಡು ಬರುತ್ತಿತ್ತು. ಅದು ಆಗಬಾರದು. ನಿಜವಾಗಿ ಸಾಹಿತ್ಯ ಪರಿಷತ್ ಅಂದರೆ ಸಾಹಿತ್ಯಿಕವಾಗಿ ಚಿಂತನೆ ನಡೆಯುವಂತಾದ್ದು ಆಗಬೇಕು. ಅಂದರೆ ಮಾತ್ರ ಅದಕ್ಕೆ ಮಹತ್ವ ಬರಲಿಕ್ಕೆ ಸಾಧ್ಯವಿದೆ. ಆ ದಿಸೆಯಲ್ಲಿ ಸಾಹಿತ್ಯ ಪರಿಷತ್‌ನವರು ಅದರ ಬಗ್ಗೆ ಒಂದು ಸ್ಪಂದನವನ್ನು ಮಾಡುವಂತಾದ್ದು, ಅದರ ಬಗ್ಗೆ ಥಿಂಕಿಂಗ್ ಮಾಡುವಂತಾದ್ದು ಆಗಬೇಕು. ಸಮ್ಮೇಳನದ ಈ ಒಂದು ನಿರ್ಣಯಗಳಿಗೆ ಸರ್ಕಾರ ತಕ್ಷಣವೇ ಸ್ಪಂದನ ಮಾಡಬೇಕೆನ್ನುವ ಸೂಚನೆಯನ್ನು ನಾನು ಕೊಡುತ್ತೇನೆ.

ಅಧ್ಯಕ್ಷರು:- ಕೊನೆಯದಾಗಿ, ಬೆಳಗಾವಿ ಜಿಲ್ಲೆಯವರೇ ಆದ ಮಾನ್ಯ ಶಿವಾನಂದ ಪಾಟೀಲ್‌ರವರು ಮಾತನಾಡಲಿಕ್ಕೆ ಕೊಡುತ್ತಿದ್ದೇನೆ.

ಶ್ರೀ ಶಿವಾನಂದ ಪಾಟೀಲ್ :- ಮಾನ್ಯ ಅಧ್ಯಕ್ಷರೇ, ನಾನು ಬಿಜಾಪುರ ಜಿಲ್ಲೆಯವನು.

ಅಧ್ಯಕ್ಷರು:- ಓಹ್, ತಾವು ಬಿಜಾಪುರ ಜಿಲ್ಲೆಯವರಲ್ಲವೇ ಆಯಿತು, ಮಾತನಾಡಿ.

ಶ್ರೀ ಎಸ್. ಶಿವಾನಂದ ಪಾಟೀಲ್ (ತಿಕೋಟಾ) :- ಸನ್ಮಾನ್ಯ ಅಧ್ಯಕ್ಷರೇ, ಈ ಬಾರಿ ಯಶಸ್ವಿಯಾಗಿ ನಡೆದಿರತಕ್ಕಂಥ ಕನ್ನಡ ಸಾಹಿತ್ಯ ಸಮ್ಮೇಳನದ ಸಂಘಟಕರಿಗೆ ಈಗಾಗಲೇ ನಮ್ಮ ಇಬ್ಬರು ನಾಯಕರು ಹೃದಯಪೂರ್ವಕವಾಗಿ ಕೃತಜ್ಞತೆಯನ್ನು ಸಲ್ಲಿಸಿದ್ದಾರೆ. ನಾವೂ ಸಲ್ಲಿಸಬೇಕಾಗುತ್ತದೆ. ಏಕೆಂದರೆ ಪ್ರತಿ ಸಾರಿ ಆಗತಕ್ಕಂಥ ಸಾಹಿತ್ಯ ಸಮ್ಮೇಳನಕ್ಕಿಂತ ಇದೇನೂ ಭಿನ್ನವಲ್ಲ. ಅದಕ್ಕೂ ಇದಕ್ಕೂ ಒಂದೇ ತರಹದಿಂದ ನಾವು ನೋಡುತ್ತಿದ್ದೇವೆ. ಆದರೆ ಈ ಸಾರಿ ವಿಶೇಷವಾಗಿ ಉತ್ತರ ಕರ್ನಾಟಕಕ್ಕೆ ಒತ್ತು ಕೊಡತಕ್ಕಂಥ ನಿರ್ಣಯಗಳನ್ನು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ತೆಗೆದುಕೊಂಡಿದ್ದಾರೆ. ಅದರಲ್ಲೂ ವಿಶೇಷವಾಗಿ ಆ 3-4 ನಿರ್ಣಯಗಳಿಗೆ ನಮ್ಮ ಮಾನ್ಯತೆ ಕೂಡ ಇದೆ, ನಾವೂ ಕೂಡ ಆದಷ್ಟು ತೀವ್ರವಾಗಿ ಸರ್ಕಾರ ಈ ನಿರ್ಣಯಗಳ ಬಗ್ಗೆ ತನ್ನ ನಿಲುವನ್ನು ಪ್ರಕಟಿಸಬೇಕು ಎಂದು ನಾನು ಈ ಮೂಲಕ ಕೇಳಿಕೊಳ್ಳುತ್ತೇನೆ. ನಮ್ಮ ಬಿಜಾಪುರ ಜಿಲ್ಲೆ ಬಗ್ಗೆ ಹೇಳುವುದಾದರೆ, ಈಗಾಗಲೇ ಮಾನ್ಯ ಸಿಂಧ್ಯಾರವರು ಹೇಳಿದ ಹಾಗೆ ಉತ್ತರ ಕರ್ನಾಟಕದ ಕೂಗು ಏಕೆ ಏಳುತ್ತಿದೆ ಎಂದರೆ, ನಮ್ಮ ಬಿಜಾಪುರ ಜಿಲ್ಲೆ ಸಂಪೂರ್ಣವಾಗಿ ಮಹಾರಾಷ್ಟ್ರ ಗಡಿ ಅಂಚಿಗೆ ಹೊಂದಿಕೊಂಡು ಇರತಕ್ಕಂಥದ್ದಾಗಿದೆ. ಬಿಜಾಪುರ ಜಿಲ್ಲೆಯಲ್ಲಿ ಬರತಕ್ಕಂಥ ಅದರಲ್ಲೂ ವಿಶೇಷವಾಗಿ ಇಂಡಿ, ಬಿಜಾಪುರ ಮತ್ತು ಸಿಂಧಗಿ ಮುಂತಾದ 3-4 ತಾಲ್ಲೂಕುಗಳ ಸರಹದ್ದಿನಲ್ಲಿ ಬರತಕ್ಕಂಥ ಹಳ್ಳಿಗಳಲ್ಲಿ ಬಹಳ ಪ್ರಮುಖವಾಗಿರತಕ್ಕಂಥ ವ್ಯತ್ಯಾಸವನ್ನು ನಾವು ಕಾಣುತ್ತಿದ್ದೇವೆ. ಪಕ್ಕದ ಮಹಾರಾಷ್ಟ್ರದಲ್ಲಿ ಕನಿಷ್ಟ 20 ತಾಸು ಕರೆಂಟ್ ಇರುತ್ತದೆ. ಆದರೆ ನಮ್ಮಲ್ಲಿ ಐದು ತಾಸೂ

ಸಿಗುವುದಿಲ್ಲ. ಮಹಾರಾಷ್ಟ್ರ ನಮ್ಮ ಜಿಲ್ಲೆ ಗಡಿ ಭಾಗದಲ್ಲಿ ಇದೆ. ನನ್ನ ಮತಕ್ಷೇತ್ರ ಕೂಡ ಮಹಾರಾಷ್ಟ್ರ ಗಡಿ ಭಾಗಕ್ಕೆ ಹೊಂದಿಕೊಂಡಿದೆ.

ಅಧ್ಯಕ್ಷರು:- ಸಾಹಿತ್ಯ ಸಮ್ಮೇಳನದ ಬಗ್ಗೆ ಹೇಳಿ.

ಶ್ರೀ ಎಸ್. ಶಿವಾನಂದ ಪಾಟೀಲ್ :- ಮಾನ್ಯ ಅಧ್ಯಕ್ಷರೇ, ಅದಕ್ಕೆ ಪೂರಕವಾಗಿಯೇ ಇದನ್ನು ಹೇಳುತ್ತಿದ್ದೇನೆ. ಮಹಾರಾಷ್ಟ್ರ ಸರ್ಕಾರ ತನ್ನ ಗಡಿಯಲ್ಲಿ ಬರತಕ್ಕಂಥ ಹಳ್ಳಿಗಳಲ್ಲಿ ಸಂಪೂರ್ಣವಾಗಿ ಒಳ್ಳೆಯ ರಸ್ತೆಗಳನ್ನು ಮತ್ತು ಇತರ ಸೌಕರ್ಯಗಳನ್ನು ಒದಗಿಸಿರತಕ್ಕದ್ದನ್ನು ನಾವು ಕಾಣಬಹುದಾಗಿದೆ. ಆ ಹಿನ್ನೆಲೆಯಲ್ಲಿ ಬಿಜಾಪುರಕ್ಕೆ ಏನಾಗಿದೆ ಎಂದರೆ, ಇವತ್ತು ಹೈದರಾಬಾದ್ - ಕರ್ನಾಟಕದಲ್ಲೂ ಕೂಡ ನಾವು ಇಲ್ಲ. ಮಲೆನಾಡಿನಲ್ಲೂ ಕೂಡ ನಾವು ಇಲ್ಲ. ಇವತ್ತು ಹೈದರಾಬಾದ್ -ಕರ್ನಾಟಕಕ್ಕೆ ವಿಶೇಷವಾದಂತಹ ಒತ್ತು ಕೊಡಲಾಗುತ್ತಿದೆ. ಮಾನ್ಯ ಖರ್ಗೆಯವರು, ಮಾನ್ಯ ಧರ್ಮಸಿಂಗ್‌ಜೀಯವರು ಮತ್ತು ಆ ಭಾಗದ ರಾಯಚೂರಿನಿಂದ ಬರತಕ್ಕಂಥ ಅನೇಕ ಪ್ರತಿನಿಧಿಗಳು ಹೈದರಾಬಾದ್-ಕರ್ನಾಟಕಕ್ಕೆ ವಿಶೇಷವಾದಂತಹ ಒತ್ತು ಕೊಟ್ಟು ಕನಿಷ್ಠ ಪಕ್ಷ 60-100 ಕೋಟಿ ರೂಪಾಯಿಗಳನ್ನಾದರೂ ಗ್ರಾಂಟ್ ಆಗಿ ಅವರು ಪ್ರತಿ ವರ್ಷ ತೆಗೆದುಕೊಂಡು ಹೋಗುತ್ತಾರೆ. ಆದರೆ ನಮ್ಮಂತೆ ಬಯಲು ಸೀಮೆಯಲ್ಲಿ ಬರತಕ್ಕಂಥವರಿಗೆ 30 ಕೋಟಿ ರೂಪಾಯಿಗಳೂ ಕೂಡ ಬರುವುದಿಲ್ಲ. ಆ ಹಿನ್ನೆಲೆಯಲ್ಲಿ, ಉತ್ತರ ಕರ್ನಾಟಕಕ್ಕೆ ಹೆಚ್ಚು ಒತ್ತು ಕೊಡುತ್ತೇವೆ ಎನ್ನತಕ್ಕಂಥ ವಿಷಯವಲ್ಲ. ಈಗ ಡಾ।। ನಂಜುಂಡಪ್ಪನವರ ವರದಿಯನ್ನು ಈ ಸರ್ಕಾರ ಗಂಭೀರವಾಗಿ ಪರಿಗಣಿಸಿ ಆದಷ್ಟು ತೀವ್ರವಾಗಿ ಇದೇ ಅಧಿವೇಶನದಲ್ಲಿ ಅದರ ಜಾರಿಗೆ ಚಾಲನೆ ಕೊಡುತ್ತೇನೆ ಎನ್ನತಕ್ಕಂಥ ಒತ್ತು ಕೊಟ್ಟರೆ, ಖಂಡಿತ ಈ ಹಾಹಿತ್ಯ ಸಮ್ಮೇಳನದ ರೆಸಲ್ಯೂಷನ್‌ಗೆ ಒಂದು ಮಹತ್ವ ಬರುತ್ತದೆ. ಇಲ್ಲದಿದ್ದರೆ ಏನೂ ಪ್ರಯೋಜನವಾಗುವುದಿಲ್ಲ. ಸರ್ಕಾರದವರು ಡಾ।। ನಂಜುಂಡಪ್ಪನವರ ವರದಿಯ ಜೊತೆಗೆ ಅನೇಕ ವರದಿಗಳನ್ನು ತರಿಸಿಕೊಂಡಿದ್ದಾರೆ. ಇತರ ವರದಿಗಳಂತೆ ಈ ವರದಿ ಕೂಡ ಮೂಲೆಗುಂಪು ಮಾಡಬಾರದು ಎಂದು ತಮ್ಮ ಮೂಲಕ ನಾನು ಸರ್ಕಾರಕ್ಕೆ ಹೇಳಲಿಕ್ಕೆ ಇಚ್ಛೆ ಪಡುತ್ತೇನೆ.

ಅಧ್ಯಕ್ಷರು:- ಕೊನೆಯದಾಗಿ ಮಾನ್ಯ ಎಸ್.ಎಸ್.ಪಾಟೀಲರಿಗೆ ಅವಕಾಶ ಮಾಡಿಕೊಡುತ್ತಿದ್ದೇನೆ. ಮಾನ್ಯ ಪಾಟೀಲ್‌ರವರೇ, ದಯವಿಟ್ಟು ಲಂಬಿಸಬೇಡಿ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ) :- ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ಬಹುಶಃ ತಾವೆಲ್ಲರೂ ಬಹಳ ಮೆಚ್ಚತಕ್ಕಂಥ ರೀತಿಯಲ್ಲಿ ಸಾಹಿತ್ಯ ಸಮ್ಮೇಳನ ಮಾಡಿದ್ದಾರೆ. ಅದಕ್ಕೆ ಶ್ರಮಿಸಿದ ಸಂಬಂಧಪಟ್ಟಂತಹ ಜಿಲ್ಲಾ ಉಸ್ತುವಾರಿ ಸಚಿವರಿಗೂ ಕೂಡ ನಾನು ಈ ಮೂಲಕ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೇನೆ. ಅದೇ ರೀತಿಯಾಗಿ ಮಾನ್ಯ ಕೋರೆಯವರಿಗೂ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಬರ ಇದ್ದರೂ ಕೂಡ, ಇದಕ್ಕೆ ಬರವೇ ಇರಬಾರದು. ನಮ್ಮ ಸಾಹಿತ್ಯ ಸಂಸ್ಕೃತಿ ಕಲೆಗೆ ಬರ ಇಲ್ಲ. ಸುಮ್ಮನೆ ಬರಗಾಲ ಎಂದು ನೆವ ಹೇಳಿ ಆ ಉತ್ಸವ ನಿಲ್ಲಿಸುವುದು ಈ ಉತ್ಸವ ನಿಲ್ಲಿಸುವುದು ಬೇಡ. ಯಾವುದೇ ಉತ್ಸವವನ್ನೂ ಸಹ ಬರದ ನೆಪದಲ್ಲಿ ನಿಲ್ಲಿಸಬಾರದು. ಕನ್ನಡದ ಕಹಳೆ ಊದಬೇಕಾಗುತ್ತದೆ. ಕೆಲವರು ಬರದಲ್ಲಿ ಏಕೆ ಸಾಹಿತ್ಯ ಸಮ್ಮೇಳನ ಮಾಡಬೇಕು ಎಂದು ಬರೆದಿದ್ದಾರೆ. ಸುಮ್ಮನೆ ಹಾಗೇ ಮಾತನಾಡುವುದು ಸರಿಯಲ್ಲ ಮಾನ್ಯ ಅಧ್ಯಕ್ಷರೇ, ನಿಜವಾಗಿ ತಮಗೂ ಕೂಡ ನಾವು ಕೃತಜ್ಞತೆಯನ್ನು ಸಲ್ಲಿಸುತ್ತೇರೆ. ಆ ದಿವಸ ನಮಗೆ ತಾವು ರಜೆ ಕೊಟ್ಟಿರಿ. ನನಗೆ ಏನು ತೊಂದರೆ ಬಂದಿತ್ತು ಅಂದರೆ, ಬಹುಶಃ ಈ

ಸದನದಲ್ಲಿ ತಾವು ಅಧಿವೇಶನ ಕರೆದ ಮೇಲೆ ಒಂದು ದಿವಸವೂ ಸಹ ನಾನು ಇಲ್ಲಿಯವರೆಗೂ ಗೈರುಹಾಜರಾಗಿಲ್ಲ. ಆ ದಿವಸ ಗೈರು ಹಾಜರಾಗಬೇಕಲ್ಲಪ್ಪ ಎಂದು ನಾನು ಚಿಂತಿತನಾಗಿದ್ದೆ. ಆದರೆ ತಾವು ಆ ದಿವಸ ರಜೆ ನೀಡಿ ನಮಗೆಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟಿದ್ದೀರಿ. ಇದಕ್ಕಾಗಿ ನಾನು ತಮಗೆ ವೈಯಕ್ತಿಕವಾದ ಕೃತಜ್ಞತೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ. ನಾನೂ ಕೂಡ ಸಾಹಿತ್ಯ ಸಮ್ಮೇಳನಕ್ಕೆ ಹೋಗಿದ್ದೆ ಅಲ್ಲಿಯ ವ್ಯವಸ್ಥೆ ನಿಜವಾಗಿ ಚೆನ್ನಾಗಿತ್ತು ಅಲ್ಲಿ ಇವರೆಲ್ಲರ ಜೊತೆಗೆ ನಾವು ನಾಗನೂರ ಸ್ವಾಮಿಗಳಿಗೂ ಕೂಡ ಇವತ್ತು ಕೃತಜ್ಞತೆ ಸಲ್ಲಿಸಬೇಕು. ಉತ್ತಮವಾದ ಊಟದ ವ್ಯವಸ್ಥೆಯನ್ನು ಎಲ್ಲಾ ಜನರಿಗೆ ಅವರು ಮಾಡಿದ್ದರು. ಅವರು ಮಾಡಿದ ಆ ವ್ಯವಸ್ಥೆಯನ್ನು ನೋಡಿದರೆ ಬಹಳ ಸಂತೋಷ ಎನಿಸುತ್ತದೆ. ನಾನು ಇಲ್ಲಿ ಪ್ರಮುಖವಾಗಿ ಹೇಳುವಂತಾದ್ದು ಏನೆಂದರೆ, ಆ ಮರಾಠಿಗರಿಗೆ ನಾನು ಇವತ್ತು ಕೃತಜ್ಞತೆ ಹೇಳಬಯಸುತ್ತೇನೆ. ಅಲ್ಲಿ ಇದ್ದಂತಹ ಮರಾಠಿ ಪತ್ರಿಕೆಗಳು, ಮರಾಠಿ ಜನ ನಿಜವಾಗಿ ಅವರು ಎಲ್ಲದಕ್ಕೂ ಸ್ಪಂದಿಸಿದ್ದಾರೆ. ಈ ಕಾರಣದಿಂದ ಇವತ್ತು ನಮ್ಮ ಕರ್ನಾಟಕ ಮತ್ತು ಮಹಾರಾಷ್ಟ್ರದ ನಡುವೆ ಒಂದು ಸೌಹಾರ್ದತೆ ಬೆಳೆಯಲಿಕ್ಕೂ ಕೂಡ ಈ ಒಂದು ಸಾಹಿತ್ಯ ಸಮ್ಮೇಳನ ಅಲ್ಲಿ ಸಹಕಾರಿಯಾಗಿದೆ ಎಂದು ಹೇಳಲಿಕ್ಕೆ ಬಹಳ ಸಂತೋಷ ಎನಿಸುತ್ತದೆ. ಹೆಮ್ಮೆ ಎನಿಸುತ್ತದೆ. ಆ ದೃಷ್ಟಿಯಿಂದ ನಾನು ಈ ಮೂಲಕವಾಗಿ ಆ ಮರಾಠಿಯ ಎಲ್ಲಾ ಪತ್ರಿಕೆಗಳವರಿಗೆ, ಅಲ್ಲಿದ್ದಂತಹ ನನ್ನ ಮರಾಠಿ ಬಂಧುಗಳಿಗೆ ಕೂಡ ನಾನು ಅನಂತಾನಂತವಾದ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಮಾನ್ಯ ಶೆಟ್ಟರ್‌ರವರು ಹೇಳಲು ಹೋಗಿ ಏಕೋ ಹಿಂದಕ್ಕೆ ಸರಿದುಕೊಂಡರು. ಏಕೆಂದರೆ, ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಹಿಂದಕ್ಕೆ ಸರಿದುಬಿಡುತ್ತಾರೆ. ಅಹಿತಕರ ಘಟನೆಗಳು ನಡೆದವು ಅಂದು ಅಷ್ಟಕ್ಕೇ ಕಟ್ ಆಗಿಬಿಟ್ಟರಿ ಅದು ಆಗಬಾರದು. ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಇದ್ದದ್ದು ಇದ್ದಂತೆ ಹೇಳುವುದನ್ನು ತಾವು ಕಲಿಯಿರಿ. ಅದನ್ನು ಮುಚ್ಚಿ ಹಿಂದಕ್ಕೆ ಸರಿಯಬೇಡಿ. ಬಹುಶಃ ಅಲ್ಲಿ ನಡೆದಂತಹ ಒಂದು ಘಟನೆಯಿಂದಾಗಿ ಮಾನ್ಯ ಪುಟ್ಟಪ್ಪನವರು ಬಹಳ ಸಿಟ್ಟಿಗೆದ್ದಿದ್ದರು. ಮಾನ್ಯ ಪಾಟೀಲ್ ಪುಟ್ಟಪ್ಪನವರು ಭಾಷಣ ಮಾತನಾಡುವಾಗ ಮಂತ್ರಿಗಳು ಹೋಗುತ್ತಾರೆ. ಇದಕ್ಕಾಗಿ ತಮ್ಮ ಭಾಷಣವನ್ನು ಬೇಗ ಮುಗಿಸಿ ಎಂದು ಹೇಳಲಾಯಿತಂತೆ. ದಯವಿಟ್ಟು ಈ ರೀತಿ ಆಗಿರುವುದು ಸರಿಯಲ್ಲ, ಮುಂದಿನ ವರ್ಷವಾದರೂ ಕೂಡ ಈ ರೀತಿ ಘಟನೆ ನಡೆಯದಂತೆ ನೋಡಿಕೊಳ್ಳಬೇಕು ಎಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಯಾರೇ ಮುಖ್ಯಮಂತ್ರಿಗಳಿದ್ದರೂ ಕೂಡ ಈ ರೀತಿ ಮಾಡುತ್ತಾ ಬಂದಿದ್ದಾರೆ. ಕೇವಲ ಇವರೊಬ್ಬರೇ ಮಾಡಿದ್ದಾರೆಂದಲ್ಲ, ನಡುವೆ ಬರುವುದು, ಎದ್ದು ಹೋಗುವುದು ಎಲ್ಲಾ ನಡೆಯುತ್ತಿದೆ. ಅವತ್ತೊಂದು ದಿವಸ ಸಂಪೂರ್ಣವಾಗಿ ಮಾನ್ಯ ಮುಖ್ಯಮಂತ್ರಿಗಳು ವೇಳೆಯನ್ನು ಇಟ್ಟುಕೊಂಡು ಅಲ್ಲಿಗೆ ಹೋಗಬೇಕು. ಬಹಳ ಚೆನ್ನಾಗಿ ನಡೆಯುವ ಹೊತ್ತಿನಲ್ಲಿ ಮಧ್ಯದಲ್ಲಿ ಎದ್ದು ಹೋಗುವುದು ಸರಿಯಲ್ಲ. ಮಾನ್ಯ ಪುಟ್ಟಪ್ಪನವರ ಬಗ್ಗೆ ತಮಗೆ ಗೊತ್ತಿದೆಯಲ್ಲವೇ? ಅವರು ಯಾರ ಮಾತನ್ನೂ ಕೂಡ ಕೇಳುವವರಲ್ಲ, ಅವರನ್ನು ಮೆರವಣಿಗೆಯಿಂದಲೂ ಕೂಡ ಅರ್ಧಕ್ಕೇ ಇಳಿಸಿಕೊಂಡು ಬಂದರು ಎಂದು ನಾನು ಕೇಳಿದ್ದೇನೆ. ಆ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ನಿಜವಾದ ವಿಚಾರ ಏನು ಎಂಬುದು ನಿಮಗೇ ಗೊತ್ತಿರಬೇಕು. ಅಧ್ಯಕ್ಷರ ಮೆರವಣಿಗೆಯಲ್ಲಿ ಅರ್ಧಕ್ಕೇ ನಿಲ್ಲಿಸಿ, ಅವಸರದಿಂದ ಇಳಿಸಿಕೊಂಡು ಬಂದರಂತೆ. ಈ ಬಗ್ಗೆ ಪತ್ರಿಕೆಗಳಲ್ಲಿ ವರದಿಯಾಗಿತ್ತು. ಪೇಪರ್‌ನಲ್ಲಿ ಬಂದಿದ್ದು ಸುಳ್ಳೋ ನಿಜವೋ ನನಗೆ ಗೊತ್ತಿಲ್ಲ

ನಾನಂತೂ ಆ ದಿವಸ ಮೆರವಣಿಗೆಯನ್ನು ವೀಕ್ಷಿಸಿಲ್ಲ. ಪೇಪರ್‌ನಲ್ಲಂತೂ ಅದು ವರದಿಯಾಗಿದೆ, ಆ ಪತ್ರಿಕೆಯನ್ನೂ ಸಹ ನಾನು ಇಟ್ಟುಕೊಂಡಿದ್ದೇನೆ. ಮಾನ್ಯ ಪುಟ್ಟಪ್ಪನವರನ್ನು ಮೆರವಣಿಗೆಯಲ್ಲಿ ಅರ್ಧಕ್ಕೇ ಇಳಿಸಿಕೊಂಡು ಬಂದರು ಎಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ದಯವಿಟ್ಟು ಈ ತರಹದ್ದು ಆಗಬಾರದು. ಮಾನ್ಯ ಸಚಿವರು ಉತ್ತರ ಏನಾದರೂ ಹೇಳುವುದಿದ್ದರೆ ನಂತರ ಹೇಳಿ. ನಾನು ಮೊದಲು ಮಾತನಾಡಿ ಬಿಡುತ್ತೇನೆ. ಆ ರೀತಿ ಆಗಿರದಿದ್ದರೆ ಸರಿ, ಆಗಿದ್ದರೆ ಆ ರೀತಿ ಆಗಬಾರದು ಎಂದು ಹೇಳುತ್ತೇನೆ. ಕನ್ನಡಕ್ಕೆ ಮಹತ್ವ ಕೊಡುವ ಕರ್ನಾಟಕದ ಮುಖ್ಯಮಂತ್ರಿಗಳು ಆ ಒಂದು ದಿವಸ, ಯಾರೇ ಇರಲಿ, ಮುಂದಿನ ವರ್ಷವಾದರೂ ಕೂಡ, ಎಲ್ಲೇ ಸಾಹಿತ್ಯ ಸಮ್ಮೇಳನ ನಡೆಯಲಿ, ಮಾನ್ಯ ಮುಖ್ಯಮಂತ್ರಿಗಳು ಆವತ್ತೊಂದು ದಿವಸ ಸಂಪೂರ್ಣವಾಗಿ ವೇಳೆಯನ್ನು ಅದಕ್ಕೆ ಮೀಸಲಾಗಿಡಬೇಕೆಂದು ನಾನು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ. ಇಡೀ ಒಂದು ವರ್ಷದಲ್ಲಿ ಒಂದು ದಿವಸ ಮೀಸಲಾಗಿಟ್ಟರೆ ಅದೇನೂ ದೊಡ್ಡದಲ್ಲ. ಹುಮಾನಾಬಾದ್‌ನಲ್ಲಿ ಮೂರು ದಿವಸ ಇದ್ದೀರಿ. ಇನ್ನೊಂದು ಕಡೆ 10 ದಿವಸ ಇರುತ್ತೀರಿ. ಕನ್ನಡದ ಕಹಳೆ ಅದೂ ಬೆಳಗಾವಿಯಲ್ಲಿ ನಡೆಯುವಾಗ ಮುಖ್ಯಮಂತ್ರಿಗಳು ನಡೆದುಕೊಂಡಿದ್ದು ಸರಿಯಲ್ಲ. ದಯವಿಟ್ಟು ಅವರು ಕೂಡ ಅದನ್ನು ತಿದ್ದುಕೊಂಡು ಮುಂದಿನ ವರ್ಷದಿಂದಲಾದರೂ ಕೂಡ ಆ ರೀತಿ ನಡೆದುಕೊಳ್ಳಬಾರದು ಎಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ತಮ್ಮ ಮೂಲಕ ನಾನು ಕಳಕಳಿಯಿಂದ ಕೇಳಿಕೊಂಡು, ಈ ಸಮ್ಮೇಳನ ಬಹಳ ಚೆನ್ನಾಗಿ ನಡೆಸಿದ್ದೀರಿ. ನಮ್ಮ ಇಬ್ಬರು ನಾಯಕರೂ ಹೇಳಿದ ವಿಷಯಗಳಿಗೆ ನಾನು ನನ್ನ ಸಹಮತಿ ವ್ಯಕ್ತಪಡಿಸುತ್ತೇನೆ. ಬರೀ ಕೇವಲ ಉತ್ಸವ ಮಾಡಿ ಅವರ ನಿರ್ಣಯಗಳನ್ನು ಓದಿ ಮುಗಿಸುವುದು ಅಲ್ಲ, ನಾವು ಸದನದಲ್ಲಿ ನಿರ್ಣಯ ಮಾಡಬೇಕಾಗುತ್ತದೆ. ಅವರು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳುವುದಕ್ಕೆ ಸಾಧ್ಯ ಇದೆ, ಅವರು ಕೇಳಿದ್ದೆಲ್ಲವನ್ನೂ ಮಾಡುವುದಕ್ಕೆ ಸಾಧ್ಯವಿಲ್ಲ, ಆದರೆ ಸಾಧ್ಯವಾದ ಮಟ್ಟಿಗೆ ನಾವೆಲ್ಲಾ ಮಾಡಬೇಕು. ಒಂದನ್ನು ಮಾತ್ರ ತಾವು ತೀವ್ರವಾಗಿ ಮಾಡಲಿಕ್ಕೆ ಸಾಧ್ಯವಾಗುತ್ತದೆ. ಅದನ್ನು ತಾವು ಮಾಡಬೇಕು. ಏನೆಂದರೆ, ಗಡಿನಾಡನ್ನು ನೋಡಲಿಕ್ಕೆ ಒಬ್ಬ ಮಂತ್ರಿ ಮಾಡಿ ಎಂದು ಹೇಳಿದ್ದಾರೆ. ಅದನ್ನು ತಾವು ತೀವ್ರದಲ್ಲಿ ಮಾಡಿ ಬಿಡಿ. ಏಕೆಂದರೆ, ಮಂತ್ರಿಗಳ ಸಂಖ್ಯೆ ಈಗಾಗಲೇ ಕಡಿಮೆ ಆಗಿವೆ, ಅದನ್ನು ತೀವ್ರದಲ್ಲಿ ತಾವು ಮಾಡಿದರೆ ಬಹಳ ಒಳ್ಳೆಯದು. ಬಹಳ ಒಳ್ಳೆಯ ಸಲಹೆಯನ್ನು ಅವರು ಮಾಡಿದ್ದಾರೆ. ಇದಕ್ಕಾಗಿ ಒಬ್ಬ ಮಂತ್ರಿಯನ್ನು ಮಾಡಿದರೆ ಏನೂ ಅಡ್ಡಿಯಿಲ್ಲ. ನಮಗೆ ಕೇಳಿದರೆ ನಾವೂ ಕೂಡ ಅದಕ್ಕೆ ಬೆಂಬಲ ಸೂಚಿಸುತ್ತೇವೆ. ಅದು ಒಳ್ಳೆಯ ಸಲಹೆ ಇದೆ. ಗಡಿನಾಡಿನ ಕನ್ನಡಿಗರಿಗೆ ಬಹಳ ತೊಂದರೆ ಇದೆ. ಕೈಯ್ಯಾರ ಕಿಯ್ಯಣ್ಣರೈ ರವರು ಬಹಳ ನೊಂದ ಮನಸ್ಸಿನಿಂದ ಮಾತನಾಡಿದ್ದಾರೆ. ಅದನ್ನೂ ಕೂಡ ತಾವು ಮಾಡಿದರೆ ನಿಶ್ಚಿತವಾಗಿ ಬಹಳ ಸಂತೋಷವಾಗುತ್ತದೆ ಎನ್ನುವ ಮಾತನ್ನು ಹೇಳಿ, ಮತ್ತೊಮ್ಮೆ ಆ ಭಾಗದ ಜನತೆ ಎಲ್ಲರಿಗೂ ಅದಕ್ಕೆ ಸಂಬಂಧಪಟ್ಟ ವ್ಯವಸ್ಥೆ ಮಾಡಿದಂತಹ ಉಸ್ತುವಾರಿ ಸಚಿವರೂ ಇರಬಹುದು, ಇನ್ನೊಬ್ಬರು ಇರಬಹುದು, ಅವರ ಹೆಸರು ಹೇಳುವುದು ಬೇಡ, ಅಲ್ಲಿ ಸಹಕಾರ ಮಾಡಿದಂತಹ ಎಲ್ಲರಿಗೂ ಕೂಡ ಈ ಮೂಲಕ ಕೃತಜ್ಞತೆ ಸಲ್ಲಿಸಿ, ನನಗೆ ಮಾತನಾಡಲಿಕ್ಕೆ ಅವಕಾಶ ಮಾಡಿದಂತಹ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಚಂದ್ರಾಕಾಂತ್ ಬೆಲ್ಲದ್ ಗುರಪ್ಪ (ದಾರವಾಡ):- ಮಾನ್ಯ ಅಧ್ಯಕ್ಷರೆ, ಬೆಳಗಾವಿಯಲ್ಲಿ ನಡೆದಂತಹ ಕನ್ನಡ ಸಾಹಿತ್ಯ ಪರಿಷತ್ತಿನ ಈ ಸಮ್ಮೇಳನ ಬಹಳ ಯಶಸ್ವಿಯಾಗಿ

ನೆರವೇರಿಸಿದ್ದಕ್ಕೆ ಅದರಲ್ಲಿ ಪಾಲ್ಗೊಂಡಂತಹ ಎಲ್ಲರಿಗೆ ನಾವು ಈ ಸದನದ ಮೂಲಕ ಅಭಿನಂದನೆ ಸಲ್ಲಿಸುತ್ತಿದ್ದೇನೆ. ಕನ್ನಡ ನಾಡಿನಲ್ಲಿ ಇದು ಬಹಳ ಮಹತ್ವದ ಸಮ್ಮೇಳನ. ಕನ್ನಡದ ಸಂಸ್ಕೃತಿ, ಕನ್ನಡ ಸಾಹಿತ್ಯ ಕನ್ನಡದ ಎಲ್ಲಾ ಬೆಳವಣಿಗೆಗೆ ಇದು ಮಹತ್ವದ್ದು. ನಮ್ಮ ಗಡಿನಾಡಿನ ಬಗ್ಗೆ ಸಹ ಇವತ್ತು ಗಮನ ಕೊಡುವಂತಹ ಕಾರ್ಯಕ್ರಮ. ಏಕೆಂದರೆ ಬೆಳಗಾಂವದಲ್ಲಿ ನಡೆದಂತಹ ಈ ಸಮ್ಮೇಳನ ಎಲ್ಲವನ್ನೂ ಆಕರ್ಷಿಸಿದೆ. ಬಹುಶಃ ಮಹಾರಾಷ್ಟ್ರದಲ್ಲಿರುವಂತಹ ಜನರನ್ನು ಸಹ ಆಕರ್ಷಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಕನ್ನಡ ನಾಡಿನಲ್ಲಿರುವ ಎಲ್ಲ ಭಾಗದ ಜನರು ಈ ನಾಡಿನಲ್ಲಿ ನಡೆದಂತಹ ಈ ಸಮ್ಮೇಳನದಲ್ಲಿ ಪಾಲುಗಾರರಾಗಿ ಅವರು ಮರಾಠಿ ಭಾಷೆಯವರು ಇರಬಹುದು, ಬೇರೆ ಭಾಷೆ ಮಾತನಾಡುವವರು ಇರಬಹುದು, ಎಲ್ಲರೂ ಸಹಿತ ಈ ಕನ್ನಡ ನಾಡಿನ ದೇವಿಯ ಸಮ್ಮೇಳನದಲ್ಲಿ ಭಾಗವಹಿಸಿದ್ದಾರೆ, ಬಹಳ ಸಂತೋಷ ಮುಖ್ಯ ಮಂತ್ರಿಗಳು ಸಹಿತ ಇದರಲ್ಲಿ ಭಾಗವಹಿಸಿದ್ದಾರೆ. ಅವರು ಇಡೀ ದಿವಸ ಇರಬೇಕಾಗಿತ್ತು. ಮಾನ್ಯ ನಮ್ಮ ನಾಯಕರು ಹಾಗೂ ಸಿಂಧ್ಯರವರು ಮಾತನಾಡಿದ್ದಾರೆ. ಅದೂ ಸಹಿತ ಬಹಳ ಮುಖ್ಯವಾದುದು. ಕನ್ನಡ ಸಾಹಿತ್ಯ ಪರಿಷತ್ತಿಗೆ ಒಂದು ಕೋಟಿ ರೂಪಾಯಿ ಕೊಡುತ್ತೇವೆಂದು ಹೇಳುವುದು ಎಷ್ಟು ಮುಖ್ಯ ಇದೆಯೋ ಅದರಲ್ಲಿ ಭಾಗವಹಿಸುವುದು ಅಷ್ಟೇ ಮುಖ್ಯ. ಅದಕ್ಕಾಗಿ ಒಂದು ದಿವಸ ಇರಬೇಕಾಗಿತ್ತು. ಮುಂದಿನ ದಿವಸಗಳಲ್ಲಿ ನಡೆಯುವಂತಹ ಕನ್ನಡ ನಾಡಿನ ಈ ಸಮ್ಮೇಳನದಲ್ಲಿ ಯಾವುದೇ ಮುಖ್ಯ ಮಂತ್ರಿಗಳಿರಲಿ ಒಂದು ದಿವಸ ಭಾಗವಹಿಸಬೇಕೆನ್ನುವುದು, ಒಂದು ಇದು ಕೇವಲ ಆಡಳಿತ ಪಕ್ಷಕ್ಕೆ ಸಂಬಂಧಿಸಿದ ಸಮ್ಮೇಳನ ಆಗಬಾರದು. ಇದರಲ್ಲಿ ಎಲ್ಲರೂ ಭಾಗವಹಿಸುವಂತಹ ಸಮ್ಮೇಳನ ಆಗಬೇಕು. ಯಾರು ಇದರ ಸಂಘಟಿಕರು ಇದ್ದಾರೆ, ಕನ್ನಡ ಸಾಹಿತ್ಯ ಪರಿಷತ್ತೇ ಇರಲಿ, ಕನ್ನಡ ಸಂಘಟನೆ ಮಾಡಿದಂತಹ ಜನರೇ ಇರಲಿಲ್ಲ ಇದರಲ್ಲಿ ಯಾರು ಇದಕ್ಕೆ ಪ್ರಮುಖರಾಗಿದ್ದಾರೆ ಅವರೆಲ್ಲಾ ಇದನ್ನು ವಿಚಾರ ಮಾಡಬೇಕು. ಇನ್ನು ಮುಂದೆ ಯಾವುದೇ ದೃಷ್ಟಿಯಿಂದ ಕನ್ನಡ ನಾಡಿನಲ್ಲಿ ನಡೆಯುವಂತಹ ಸಮ್ಮೇಳನ ಎಲ್ಲರನ್ನೂ ಒಳಗೊಂಡಂತೆ, ಮತ್ತು ಎಲ್ಲಾ ಭಾಷೆಯವರನ್ನೂ ಒಳಗೊಂಡಂತೆ ಹೇಗೆ ಮಾಡಬೇಕಾಗಿದೆಯೋ ಹಾಗೆ ಎಲ್ಲಾ ರಾಜಕೀಯ ಪಕ್ಷಗಳನ್ನು ಒಳಗೊಂಡಂತೆ ಮಾಡಬೇಕಾಗಿದೆ. ಮತ್ತು ಕೇಂದ್ರದಲ್ಲಿ ನಮ್ಮವರೇ ಆದ ಮಂತ್ರಿಗಳೂ ಕೂಡ ಇದ್ದಾರೆ. ಅವರೂ ಕೂಡ ಕನ್ನಡಿಗರೇ, ಅವರೂ ಸಹ ಈ ಸಮಾರಂಭದಲ್ಲಿ ಭಾಗವಹಿಸಿ ಕನ್ನಡ ನಾಡಿನ ಬೆಳವಣಿಗೆಗೆ ಕಾರಣೀಕರ್ತರು ಆಗಬೇಕು. ವಿಶ್ವ ಕನ್ನಡ ಸಮ್ಮೇಳನ 1985ರಲ್ಲಿ ಮೈಸೂರಿನಲ್ಲಿ ಆಗಿತ್ತು, ಅದೇ ಪ್ರಕಾರ 2004ರಲ್ಲಿ ಬೆಂಗಳೂರಿನಲ್ಲಿ ಮಾಡಬೇಕೆಂದು ಮುಖ್ಯಮಂತ್ರಿಗಳು ಹೇಳಿದ್ದಾರೆ. ಅದಕ್ಕೆ ಹೆಚ್ಚು ಒತ್ತು ಕೊಟ್ಟು, ಆ ಕಾರ್ಯಕ್ರಮದಲ್ಲಿ ಪ್ರವೃತ್ತರಾಗಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಹ ಜನ ಇದರಲ್ಲಿ ಭಾಗಿಗಳಾಗುವ ಹಾಗೆ ಮಾಡಬೇಕು. ಕೇವಲ ರಾಜ್ಯದ ನಾಯಕರಲ್ಲ, ರಾಷ್ಟ್ರದಲ್ಲಿರುವಂತಹ ಎಲ್ಲಾ ನಾಯಕರು ಇನ್ನು ಮೇಲೆ ಈ ಕನ್ನಡ ಸಾಹಿತ್ಯ ಸಮ್ಮೇಳನ ಕಾರ್ಯಕ್ರಮದಲ್ಲಿ ಭಾಗವಹಿಸುವ ಹಾಗೆ ಮಾಡಬೇಕೆಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೈಲಾಸ್‌ನಾಥ್ ಪಾಟೀಲ್ (ಚಿಂಚೋಳಿ) :- ಬೆಳಗಾವಿಯಲ್ಲಿ ನಡೆದಂತಹ ಸಾಹಿತ್ಯ ಸಮ್ಮೇಳನದಲ್ಲಿ ಏನು ರೆಸಲ್ಯೂಷನ್‌ಗಳಾಗಿವೆ ಅದರ ಬಗ್ಗೆ ನಾನು ಕೂಡ ಕೆಲವು ಮಾತನಾಡಬೇಕು ಎನ್ನುವ ವಿಚಾರದಲ್ಲಿ ಮಾತನಾಡುತ್ತಿದ್ದೇನೆ. ಕೆಲವು ಸದಸ್ಯರು ಹೇಳಿದ ಹಾಗೆ ಗಡಿನಾಡು ಅಭಿವೃದ್ಧಿ ಬಗ್ಗೆ ಸಮ್ಮೇಳನದಲ್ಲಿ ಆಗಿರತಕ್ಕಂತಹ ರೆಸಲ್ಯೂಷನ್ ನಾನು ಸ್ವಾಗತ

ಮಾಡುತ್ತೇನೆ. ಏಕೆಂದರೆ, ನನ್ನ ಕ್ಷೇತ್ರ ಏನಿದೆ ಅದೂ ಕೂಡ ಗಡಿ ಕ್ಷೇತ್ರದಲ್ಲಿ ಬರತಕ್ಕಂತಹ ಕ್ಷೇತ್ರ. ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವಂತಹ ಕ್ಷೇತ್ರ. ಈ ಕ್ಷೇತ್ರ ಅಭಿವೃದ್ಧಿಯಾಗಬೇಕೆಂದು ಹಿಂದೆ ವೀರೇಂದ್ರ ಪಾಟೀಲರು ಇದ್ದಾಗ ಗಡಿ ಅಭಿವೃದ್ಧಿ 25 ಲಕ್ಷ ರೂಪಾಯಿ ಪ್ರತಿಯೊಂದು ತಾಲ್ಲೂಕಿಗೂ ಕೊಡುತ್ತಿದ್ದರು. ಗಡಿ ಪ್ರದೇಶದಲ್ಲಿರತಕ್ಕಂತಹ ಎಲ್ಲಾ ತಾಲ್ಲೂಕುಗಳಿಗೂ ವರ್ಷವರ್ಷ 25 ಲಕ್ಷ ರೂಪಾಯಿ ಕೊಡುತ್ತಿದ್ದರು. ಅದು ಬರ ಬರುತ್ತಾ ಕಡಿಮೆಯಾಗುತ್ತಿದೆ. ಈ ವರ್ಷ ನನ್ನ ಕ್ಷೇತ್ರಕ್ಕೆ ಬಂದ ಅಮೌಂಟ್ ಬರೀ ಒಂದೂವರೆ ಲಕ್ಷ ಮಾತ್ರ. ಬೇರೆ ಬೇರೆ ಕ್ಷೇತ್ರಕ್ಕೆ ಬಂದಿರುವಂಥದ್ದು 10 ಲಕ್ಷ ರೂ ಇದೆ, 15 ಲಕ್ಷ ರೂ ಇದೆ, ಆದರೆ ನನ್ನ ಕ್ಷೇತ್ರಕ್ಕೆ ಬಂದಿರುವುದು ಬರೀ ಒಂದೂವರೆ ಲಕ್ಷ ರೂ ಮಾತ್ರ. ಇದನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತಂದಿದ್ದೇನೆ. ನಾನು ಹೇಳುವುದು ಇಷ್ಟೇ ಎಲ್ಲರಿಗೂ ಕೊಡಿ, ಆದರೆ ಹೆಚ್ಚಿನ ಪ್ರಮಾಣದಲ್ಲಿ ಈ ಗಡಿ ಭಾಗದಲ್ಲಿ ಬರತಕ್ಕಂತಹ ಪ್ರದೇಶಗಳಿಗೆ ಹಣ ಒದಗಿಸಿ ಕೊಡಿ ಎಂದು ನಾನು ಈ ಸಮಯದಲ್ಲಿ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ.

+ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು) :- ಮಾನ್ಯ ಸಭಾಧ್ಯಕ್ಷರೆ, ಕಳೆದ ಮೂರು ದಿವಸಗಳಿಂದ ಬೆಳಗಾವಿಯಲ್ಲಿ ಕನ್ನಡ ನಾಡಿನ 70ನೇ ಸಾಹಿತ್ಯ ಸಮ್ಮೇಳನವನ್ನು ಬಹಳ ವಿಜೃಂಭಣೆಯಿಂದ ಅಭೂತಪೂರ್ವವಾಗಿ ನೆರವೇರಿಸಿದ್ದೇವೆ. ಅದರಲ್ಲಿ ಎಲ್ಲಾ ಜನರು ಶಾಸಕರು, ಚುನಾಯಿತ ಪ್ರತಿನಿಧಿಗಳು ಒಳ್ಳೆಯ ಸಹಕಾರವನ್ನು ಕೊಟ್ಟಿದ್ದಕ್ಕೆ ಗಡಿನಾಡು ಬೆಳಗಾವಿಯಲ್ಲಿ ಇಂತಹ ಅಭೂತಪೂರ್ವವಾದಂತಹ ಕಾರ್ಯಕ್ರಮ ಜರುಗಿದ್ದು ನಮ್ಮೆಲ್ಲರಿಗೂ ಸಂತೋಷವಾಯಿತು. ಅದರಲ್ಲೂ ಸಹಿತ ಮೆರವಣಿಗೆಯಲ್ಲಿ ಸುಮಾರು ಒಂದು ಲಕ್ಷ ಜನ ಭಾಗವಹಿಸಿದ್ದಾರೆ. ಕನ್ನಡ, ಮರಾಠಿ ಮತ್ತು ಎಲ್ಲಾ ಭಾಷಿಗರು ಯಾವುದೇ ಭೇದಭಾವವಿಲ್ಲದೆ ಇದಕ್ಕೆ ಪ್ರೋತ್ಸಾಹ ಕೊಟ್ಟಿದ್ದು ಒಂದು. ಪ್ರತಿನಿತ್ಯ ಸುಮಾರು ಒಂದು ಲಕ್ಷ ಜನರಿಗೆ ಮಹಾ ಪ್ರಸಾದ ಮುಕ್ತವಾಗಿ ನೀಡಲಾಗಿದೆ. ಯಾರು ಬೇಕಾದರೂ ಊಟಕ್ಕೆ ಬರಬಹುದು, ಈ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಕೆಲವು ಅಲ್ಪಸ್ವಲ್ಪ ಕುಂಠಿತ ವಿಚಾರಗಳನ್ನು ನನ್ನ ಗಮನಕ್ಕೆ ತಂದರು. ಆದರೆ ಸಾಹಿತ್ಯ ಸಮ್ಮೇಳನದವರೇ ಕಾರ್ಡುಗಳನ್ನು ಮಾಡಿ ಯಾರ್ಯಾರನ್ನು ಕರೆಸಿಕೊಳ್ಳಬೇಕು ಎಂದು ಅವರು ನಿರ್ಧಾರ ಮಾಡಿದ್ದಾರೆ ಹೊರತು ನಾವಲ್ಲ. ಅದು ಎಲ್ಲರ ಗಮನದಲ್ಲಿ ಬರಬೇಕು. ಜನರು ನಮಗೆ ನೇರವಾಗಿ ಹೇಳಿದರು, ಇದು ಸಾಹಿತ್ಯ ಪರಿಷತ್ತಿನ ಕಾರ್ಯಕ್ರಮ ಇದನ್ನು, ಕಾರ್ಯಕ್ರಮದ ಪಟ್ಟಿ ಮತ್ತು ಯಾರನ್ನು ಕರೆಯಬೇಕೆಂದು ಅವರ ಲೆಕ್ಕದ ಪ್ರಕಾರ ಕರೆದಿದ್ದಾರೆಯೇ ಹೊರತು ನಾವು ಕೇವಲ ಬಂದ ಜನರಿಗೆ ಊಟ, ಇರಲಿಕ್ಕೆ ವ್ಯವಸ್ಥೆ ಸಾರಿಗೆ ವ್ಯವಸ್ಥೆ ಇನ್ನಿತರ ಎಲ್ಲಾ ಸುವ್ಯವಸ್ಥೆ ಮಾಡುವ ಸಲುವಾಗಿ ಉಸ್ತುವಾರಿ ಸಚಿವನಾಗಿ ನಾನು ಮಾಡಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಗಡಿ ಭಾಗದಲ್ಲಿರುವಂತಹ ಹಳ್ಳಿಗಳು ನಾವು ಮಹಾರಾಷ್ಟ್ರಕ್ಕೆ ಹೋಗುತ್ತಿದ್ದೇವೆ ಅವುಗಳ ಸುಧಾರಣೆಯಾಗಬೇಕೆಂದು ಹೇಳಿದರು, ಜನರು ಹೇಳಿದ ನಂತರ ನಮ್ಮ ಸಚಿವರಾದ ಮಾನ್ಯ ಘೋರ್ಪಡೆಯವರು ಪ್ರತ್ಯಕ್ಷವಾಗಿ ಅಲ್ಲಿಗೆ ಹೋಗಿ 26 ಹಳ್ಳಿಗಳಲ್ಲಿರತಕ್ಕಂತಹ ಕುಡಿಯುವ ನೀರಿನ ಸಮಸ್ಯೆ, ರಸ್ತೆ ಶಾಲೆಗಳ ಸಮಸ್ಯೆ ಬಗ್ಗೆ ವಿವರವಾಗಿ ಸರ್ಕಾರದಿಂದ ಕೆಲಸಗಳನ್ನು ಮಾಡುತ್ತಿದ್ದಾರೆ. ಅವರು ಹೇಳಿದ್ದು ಸರಿ ತೊಂದರೆ ಬಂದ ಕೂಡಲೇ ಕೇಳುತ್ತಾರೆ. ಅದನ್ನು ಸರ್ಕಾರ ಸಮರ್ಪಕವಾಗಿ ನೆರವೇರಿಸುವ ಕಾರ್ಯಕ್ರಮ ಹಾಕಿಕೊಂಡಿದೆ. ಇನ್ನು ಅವರು ಏನು ರೆಸಲ್ಯೂಷನ್ ಮಾಡಿ ಕಳುಹಿಸಿದ್ದಾರೆ ಅದನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು

ಹೇಳಿ ಬಂದರು, ತಾವು ಕಳುಹಿಸಿಕೊಟ್ಟ ನಿರ್ಣಯಗಳನ್ನು ನಾವು ಆದಷ್ಟು ಬೇಗ ಕಾರ್ಯರೂಪಕ್ಕೆ ತರುತ್ತೇವೆಂದು ಹೇಳಿದರು. ಶಾಸಕರು ಸಮಸ್ಯೆಗಳನ್ನು ಹೇಳಿದರು. ಮಾನ್ಯ ಮುಖ್ಯ ಮಂತ್ರಿಗಳು ನನಗೆ ಬೇಗೆ ಭಾಷಣ ಮುಗಿಸಿ ಎಂದು ಚೀಟಿ ಕೊಟ್ಟರು ಎಂದು ಹೇಳುವುದು ಸರಿಯಲ್ಲ. ಪ್ರತ್ಯಕ್ಷವಾಗಿ ಮುಖ್ಯಮಂತ್ರಿಗಳು ಬಂದ ತಕ್ಷಣ ನನಗೆ ಹೇಳಿದರು, ಎರಡು ಗಂಟೆಯಿಂದ ಐದು ಗಂಟೆಯವರೆಗೆ ನಾನು ಇರುತ್ತೇನೆ, ಇದನ್ನು ಪಾಟೀಲ್ ಪುಟ್ಟಪ್ಪನವರಿಗೂ ನಾನು ಹೇಳಿದ್ದೇನೆ. ನನಗೆ ಬೇರೆ ಕಾರ್ಯಕ್ರಮಗಳಿವೆ, ಕೌಜಲಗಿಯವರೇ ಸುಮಾರು ಎರಡೂವರೆ ಗಂಟೆಗಳ ಕಾಲ ನನಗೆ ಬಿಡುವು ಮಾಡಿ ಕೊಡಿ, ನನಗೆ ಊಟದ ವ್ಯವಸ್ಥೆ ಅವಶ್ಯಕತೆ ಇಲ್ಲ ಎಂದಾಗ, ಕಾರ್ಯಕ್ರಮ ಮಾಡೋಣ ಎಂದರು. ಕಾರ್ಯಕ್ರಮಗಳು ನಡೆಯುವ ಸಮಯದಲ್ಲಿ ವೇಳೆಯಲ್ಲಿ ಹೆಚ್ಚು ಕಡಿಮೆಯಾಗುತ್ತದೆ. ಎಲ್ಲರಿಗೂ ಮಿನಿಟ್ ಟು ಮಿನಿಟ್ ಕೆಲಸ ಮಾಡುವುದಕ್ಕಾಗುವುದಿಲ್ಲ. ಅದರಲ್ಲಿ ಲೇಟಾದ್ದರಿಂದ ನಾವು ಕೇಳಿಕೊಂಡವು. ಅಧ್ಯಕ್ಷರ ಭಾಷಣ ಮಾಡುವುದು ತಡವಾಯಿತು, ಕೊನೆಗೂ ಮುಖ್ಯಮಂತ್ರಿಗಳು ಅಧ್ಯಕ್ಷರ ಭಾಷಣ ಮುಗಿಯುವವರೆಗೆ ಕೂತು ಅದು ಮುಗಿದ ನಂತರ ಅವರು ಬಂದಿದ್ದಾರೆ. ಇದರ ಹೊರತು, ಅದರಲ್ಲಿ ಅಧ್ಯಕ್ಷರಿಗೆ ಅಗೌರವ ಮಾಡಬೇಕು ಎನ್ನುವ ದೃಷ್ಟಿಯಿಂದ ಅಲ್ಲ, ಸುಮಾರು ಗಂಟೆಗಳ ಕಾಲ ಅವರು ತಂದಿದ್ದಾರೆ. ಏಕೆಂದರೆ ಅವರು ಮುಖ್ಯಮಂತ್ರಿಗಳಿದ್ದಾರೆ. ಅವರಿಗೆ ಎಷ್ಟೋ ಕಾರ್ಯಕ್ರಮಗಳಿರುತ್ತವೆ. ಅವರು ಸುಮಾರು ಆರೂವರೆ ಗಂಟೆಗೆ ಫ್ಲೈಟ್ ಟೇಕ್ ಆಫ್ ಮಾಡಿಕೊಂಡು ಇಲ್ಲಿ ಬಂದು ಕಾರ್ಯಕ್ರಮ ಮಾಡಿದರು ಅದರ ಬಗ್ಗೆ ನಾವು ಅಗೌರವ ಮಾಡಬೇಕೆನ್ನುವ ದೃಷ್ಟಿಯಿಂದ ಅಲ್ಲ, ಕಾರ್ಯದ ಒತ್ತಡದ ಸಲುವಾಗಿ ಹೋಗಿದ್ದಾರೆಯೇ ಹೊರತು, ಅವರೂ ಪೂರ್ಣ ಭಾಷಣದವರೆಗೆ ಇದ್ದರು.

1.00 ಪಿ.ಎಂ.

ಇದಕ್ಕೆ ಇಡೀ ಕರ್ನಾಟಕದ ಜನರ ಸಹಕಾರ ಇತ್ತು. ಪ್ರತಿ ನಿತ್ಯ ಸುಮಾರು 50 ರಿಂದ 60 ಸಾವಿರ ಜನರು ಪೆಂಡಾಲ್‌ನಲ್ಲಿ ಜನರು ಇದ್ದು ಈ ವಿಚಾರದ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಂಡರು. ಇಲ್ಲಿ ಒಂದು ಕೂದಲಿನಷ್ಟು ಯಾವ ತಕರಾರೂ ಕೂಡ ಇರಲಿಲ್ಲ. ಯಾವ ಜನರದ್ದು ಕೂಡ ತೊಂದರೆ ಇಲ್ಲದೇ ಬಂದಂಥ ಎಲ್ಲಾ ಜನರಿಗೆ ನಾವು ವ್ಯವಸ್ಥೆಯನ್ನು ಮಾಡಿ ಈ ಕಾರ್ಯಕ್ರಮವನ್ನು ಚೆನ್ನಾಗಿ ನಡೆಸಿಕೊಡುವುದಕ್ಕಾಗಿ ಎಲ್ಲಾ ರೀತಿಯ ಅವಶ್ಯಕ ಅನುಕೂಲತೆಗಳನ್ನು ನಾವು ಮಾಡಿಕೊಟ್ಟಿದ್ದೇವೆಂದು ಹೇಳಬಯಸುತ್ತೇನೆ. ಕಾರ್ಯಕ್ರಮ ಯಶಸ್ವಿಯಾಗಿದೆ, ಇದರಿಂದಾಗಿ ನಾನು ಎಲ್ಲಾ ಕನ್ನಡಿಗರಿಗೆ ನನ್ನ ಅಭಿನಂದನೆಗಳನ್ನು ಸಲ್ಲಿಸುತ್ತೇನೆಂದು ನಾನು ತಮ್ಮ ಮೂಲಕ ಹೇಳಬಯಸುತ್ತೇನೆ.

ಅಧ್ಯಕ್ಷರು:- ಸಂತೋಷ.

ಶ್ರೀ ಪಿ.ಜಿ. ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಸರ್ಕಾರ ಒಂದು ದೃಢ ನಿಲುವನ್ನು ತೆಗೆದುಕೊಳ್ಳಬೇಕಾಗುತ್ತದೆ. ಇದರಲ್ಲಿ ಒಂದನೆಯದಾಗಿ ಡಾ।। ನಂಜುಂಡಪ್ಪನವರ ವರದಿ ಏನಿದೆ ಅದರ ಅನುಷ್ಠಾನ ಮಾಡುವುದಕ್ಕಾಗಿ ಈ ವರ್ಷದ ಬಜೆಟ್‌ನಲ್ಲಿ ಹಣವನ್ನು ಇಡಬೇಕೆಂದು ಹೇಳಿದ್ದಾರೆ. ಕೊನೆಯದಾಗಿ ನಾನು ಮಾತನಾಡುವಾಗ ಮಾನ್ಯ ಕೌಜಲಗಿಯವರೆ, ಇರಲಿಲ್ಲ. ಸಮ್ಮೇಳನದಲ್ಲಿ ಬಹಳ ಚೆನ್ನಾಗಿ ವ್ಯವಸ್ಥೆಗಳನ್ನು ಮಾಡಿದ್ದ ತಮಗೆ ಮುಖ್ಯವಾಗಿ, ವಿಶೇಷವಾಗಿ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸಿದ್ದೇನೆ. ಮಾನ್ಯ ನಂಜುಂಡಪ್ಪನವರ

ವರದಿಯ ಬಗ್ಗೆ ಹಾಗೂ ಇನ್ನಿತರ ಮೂರು ತೀರ್ಮಾನಗಳನ್ನು ಸಾಹಿತ್ಯ ಸಮ್ಮೇಳನದಲ್ಲಿ ತೆಗೆದುಕೊಂಡಿದ್ದಾರೆ. ಅದರಲ್ಲಿ ಮೊದಲನೆಯದಾಗಿ ವಿಶ್ವ ಕನ್ನಡ ಸಮ್ಮೇಳನ ನಡೆಸುವುದರ ಬಗ್ಗೆ, ಬೆಳಗಾವಿಯಲ್ಲಿ ವಿಧಾನ ಮಂಡಲದ ಅಧಿವೇಶನ ನಡೆಸುವುದರ ಬಗ್ಗೆ, ಮತ್ತು ಮಕ್ಕಳ ಸಾಹಿತ್ಯ ಅಕಾಡೆಮಿಯನ್ನು ರಚನೆ ಮಾಡುವುದರ ಬಗ್ಗೆ ಹೇಳಿದ್ದಾರೆ. ಇವೆಲ್ಲವನ್ನೂ ನಾನು ಒಪ್ಪುತ್ತೇನೆಂದು ನೀವೂ ಕೂಡ ನಿನ್ನೆಯ ದಿವಸ ಅಲ್ಲಿ ಹೇಳಿದ್ದೀರಿ. ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ತಾವು ಆ ಮಾತುಗಳನ್ನು ಅಲ್ಲಿ ಹೇಳಿದ್ದೀರಿ. ಇದರ ಬಗ್ಗೆ ಸರ್ಕಾರದ ಧೋರಣೆ ಏನು ಎಂಬುದು ನಮಗೆ ತಿಳಿಯಬೇಕು. ಎರಡನೆಯದಾಗಿ ಈಗ ಸಚಿವ ಸಂಪುಟದಲ್ಲಿರುವ ಒಬ್ಬ ಮಂತ್ರಿಗಳು ಕನ್ನಡದ ಬಗ್ಗೆ ಉದಾಸೀನ ಮಾಡಿದರು ಎಂಬುದಾಗಿ ಸಮ್ಮೇಳನದ ಅಧ್ಯಕ್ಷರಾದ ಮಾನ್ಯ ಪಾಟೀಲ್ ಪುಟ್ಟಪ್ಪನವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಹೇಳಿದ್ದಾರೆ. ಅದರ ಬಗ್ಗೆ ನಾನು ಮುಖ್ಯಮಂತ್ರಿಗಳಿಗೆ ತಿಳಿಸುತ್ತೇನೆ ಎನ್ನತಕ್ಕಂಥ ಮಾತನ್ನು ಕೂಡ ಅವರು ಹೇಳಿದ್ದಾರೆ. ಅವರನ್ನು ಸಚಿವ ಸಂಪುಟದಿಂದ ಕೈಬಿಡಬೇಕೆಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು:- ಆಯಿತು. ಈಗ ಸಮ್ಮೇಳನದಲ್ಲಿ ಏನು ನಿರ್ಣಯಗಳಾಗಿದೆಯೋ ಅದರಲ್ಲಿ ಕೆಲವು ನಿರ್ಣಯಗಳು ಸರ್ಕಾರಕ್ಕೆ ನೇರವಾಗಿ ಸಂಬಂಧಪಟ್ಟಂಥವುಗಳಾಗಿವೆ. ನಮಗೆ ಸಂಬಂಧಪಟ್ಟಂತೆ ಮಾಡಿರುವ ನಿರ್ಣಯದಲ್ಲಿ ಚಳಿಗಾಲದ ಅಧಿವೇಶನವನ್ನು ಬೆಳಗಾವಿಯಲ್ಲಿ ಮಾಡಬೇಕೆಂದು ಹೇಳಿದ್ದಾರೆ. ಅದರ ಬಗ್ಗೆ ತೀರ್ಮಾನಕ್ಕೆ ಮುಂಚೆ ನಾನು ಮತ್ತು ವಿಧಾನ ಪರಿಷತ್ತಿನ ಸಭಾಪತಿಗಳೂ ಕೂಡಿ ಸಾಧ್ಯವಾದರೆ ಬೆಳಗಾಂಗೆ ಹೋಗಿ ನೋಡಿಕೊಂಡು ಅಧಿವೇಶನ ನಡೆಸಲು ಎಲ್ಲಾ ಅನುಕೂಲಗಳು ಇದೆಯೇ ಎಂಬ ಬಗ್ಗೆ ನೋಡುತ್ತೇವೆ. ಏಕೆಂದರೆ ಅಧಿವೇಶನ ನಡೆಸಬೇಕೆಂದರೆ ಅದಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳು ಅಲ್ಲಿ ಇರಬೇಕಲ್ಲವೆ? ಇಷ್ಟು ಸದಸ್ಯರಿಗೆ ಹಾಗೂ ಕೌನ್ಸಿಲ್ ಮೆಂಬರ್‌ಗಳಿಗೆ ಅಗತ್ಯವಾಗಿ ಇಳಿದುಕೊಳ್ಳಲು ಜಾಗ ಇರಬೇಕು, ಇದರ ಜೊತೆಗೆ ಸ್ಟಾಫ್‌ಗೂ ಕೂಡ ವ್ಯವಸ್ಥೆ ಆಗಬೇಕು, ಆದುದರಿಂದ ಇದರ ಬಗ್ಗೆ ಎಲ್ಲವನ್ನೂ ನಾವು ನೋಡಿಕೊಂಡು ಬಂದು ತದನಂತರ ಸರ್ಕಾರಕ್ಕೆ ಈ ಬಗ್ಗೆ ತಿಳಿಸುತ್ತೇವೆ. ಸಧ್ಯಕ್ಕೆ ಅದರ ಬಗ್ಗೆ ನಾನು ಇಷ್ಟು ಮಾತ್ರ ಹೇಳಬಲ್ಲೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ (ಮುಖ್ಯ ಸಚೇತಕರು) :- ಮಾನ್ಯ ಅಧ್ಯಕ್ಷರೆ, ಬೆಳಗಾಂ ಡಿವಿಶನ್‌ನಲ್ಲಿ ಎಲ್ಲಿ ಆಗುತ್ತದೆ ಅಲ್ಲಿಗೆಲ್ಲಾ ಹೋಗಿ ನೋಡಿಬಿಡಿ. ಕೇವಲ ಬೆಳಗಾಂ ಮಾತ್ರವಲ್ಲ, ಬೆಳಗಾಂ ಡಿವಿಶನ್‌ನಲ್ಲಿ ಎಲ್ಲಿ ನಡೆಸಬಹುದು ಎಂಬ ಬಗ್ಗೆ ತಾವು ನೋಡಿ.

ಅಧ್ಯಕ್ಷರು :- ಆಯಿತು. ಹುಬ್ಬಳ್ಳಿ-ಧಾರವಾಡ ನೋಡೋಣ, ಬಿಜಾಪುರ ನೋಡೋಣ. ಅದಕ್ಕೇನಂತೆ.

ಶ್ರೀ ಅಪ್ಪಾಜಿ ಎಸ್. ನಾಡಗೌಡ :- ಗುಲ್ಬರ್ಗಾ, ಬಿಜಾಪುರ, ಕೂಡಲಸಂಗಮ ಕೂಡ ಇದೆ.

ಶ್ರೀ ಶಿವಾನಂದ ಎಸ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮಾನ್ಯ ಅಪ್ಪಾಜಿಯವರು ಹೇಳಿದ್ದಕ್ಕೆ ನನ್ನ ಸಹಮತ ಇದೆ. ಬಿಜಾಪುರದ ಹತ್ತಿರ ಕೂಡಲಸಂಗಮದಲ್ಲಿ ತಾವು ಅಧಿವೇಶನ ನಡೆಸಿದರೂ ಕೂಡ ಬೆಳಗಾಂಗಿಂತಲೂ ಇನ್ನೂ ಚೆನ್ನಾಗಿರುತ್ತದೆ ಎಂದು ಹೇಳುತ್ತೇನೆ. ಆದ ಕಾರಣ ಕೂಡಲಸಂಗಮದಲ್ಲಿ ಅಧಿವೇಶನ ನಡೆಸಿ. ತಾವು ಪರಿಶೀಲನೆ ಮಾಡುವಾಗ ಕೂಡಲ ಸಂಗಮಕ್ಕೂ ಹೋಗಿ ನೋಡಿ.

ಅಧ್ಯಕ್ಷರು:- ನೋಡೋಣ. ಎಲ್ಲಾ ಸೌಕರ್ಯಗಳೂ ಇರಬೇಕಲ್ಲಾ. ಎಲ್ಲಾ ಸೌಕರ್ಯಗಳು ಇದ್ದರೆ ನಡೆಸೋಣ. ನೋಡಿ, ಇದೇ ರೀತಿ ಶ್ರೀಮಾನ್ ಹನುಮಂತಯ್ಯನವರ ಕಾಲದಲ್ಲಿಯೇ ದಕ್ಷಿಣ ಭಾರತದಲ್ಲಿ ಲೋಕಸಭೆ ಹಾಗೂ ರಾಜ್ಯಸಭೆ ಅಧಿವೇಶನ ನಡೆಯಬೇಕೆಂದು ಹೇಳಿ ಈ ವಿಧಾನಸೌಧವನ್ನು ಕಟ್ಟಿಸಿರುವುದು ಎಂದು ಅವರು ಅನೇಕ ಬಾರಿ ಹೇಳಿರುವುದು ನಮಗೆ ಜ್ಞಾಪಕವಿದೆ. ಆದುದರಿಂದ ಅದರ ಬಗ್ಗೆ ಲೋಕಸಭೆಯವರು ಮತ್ತು ಸೆಂಟ್ರಲ್ ಗೌವರ್ನಮೆಂಟ್‌ನವರು ಡಿಸೈಡ್ ಮಾಡಬೇಕು.

ಶ್ರೀ ಜೆ.ಟಿ. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ಕೂಡಲಸಂಗಮದಲ್ಲಿ ಅಧಿವೇಶನ ಮಾಡಿದರೆ ಬಹಳ ಚೆನ್ನಾಗಿರುತ್ತದೆ.

ಅಧ್ಯಕ್ಷರು:- ಎಲ್ಲಾ ಅನುಕೂಲಗಳೂ ಇದ್ದರೆ ಅಲ್ಲಿಯೇ ಮಾಡೋಣ ಬಿಡಿ. ಬೆಳಗಾಂ ಡಿವಿಶನ್‌ನಲ್ಲಿಯೇ ನೋಡೋಣ. ಮೊದಲು ನಾನು ಮತ್ತು ಸಭಾಪತಿಗಳು ಹೋಗಿ ನೋಡಿಕೊಂಡು ಬರುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ಮಾನ್ಯ ಅಧ್ಯಕ್ಷರೆ, ಇನ್ನೊಂದು ವಿಷಯ ಹೇಳಬಯಸುತ್ತೇನೆ. ಈಗ ತಾವು ಯಾವ ರೀತಿಯಲ್ಲಿ ಪಾಸಿಟಿವ್ ಆಗಿ ಪ್ರತಿಕ್ರಿಯೆ ಮಾಡಿದ್ದೀರಿ. ಅದೇ ರೀತಿ ಸಮ್ಮೇಳನದ ಇನ್ನಿತರ ನಿರ್ಣಯದ ಬಗ್ಗೆ ಸರ್ಕಾರದವರು ಪ್ರತಿಕ್ರಿಯೆ ವ್ಯಕ್ತಮಾಡಲಿ. ಇಲ್ಲಿ ಮಾನ್ಯ ಗೃಹ ಸಚಿವರು ಇದ್ದಾರೆ, ನಿನ್ನೆ ಮಾನ್ಯ ಕೌಜಲಗಿಯವರು ಅಧಿವೇಶನದಲ್ಲಿ ಸರ್ಕಾರಿ ಧೋರಣೆಯ ಬಗ್ಗೆ ಹೇಳಿದ್ದಾರೆ. ಈಗ ಸದನದಲ್ಲಿ ಸರ್ಕಾರದ ನಿಲುವು ಏನು ಎಂಬ ಬಗ್ಗೆ ತಿಳಿಸಬೇಕೆಂದು ತಮ್ಮ ಮೂಲಕ ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು :- ಮಾನ್ಯ ಕೌಜಲಗಿಯವರೆ, ಈ ಬಗ್ಗೆ ಸರ್ಕಾರದ ಗಮನಕ್ಕೆ ತನ್ನಿ.

ಶ್ರೀ ವಿ.ಎಸ್. ಕೌಜಲಗಿ :- ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯಗಳನ್ನು ಸರ್ಕಾರವೇ ಪರಿಶೀಲನೆ ಮಾಡಿ ತೀವ್ರಗತಿಯಲ್ಲಿ ಕ್ರಮ ಕೈಗೊಳ್ಳುತ್ತದೆ ಎಂದು ನಾನು ಹೇಳಿದ್ದೇನೆ.

ಅಧ್ಯಕ್ಷರು :- ಆಯಿತು ಬಿಡಿ.

(ಇ) ಹಿರೇಕೆರೂರಿನ ಶ್ರೀ ಬಸವೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ ಬಗ್ಗೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಮಾನ್ಯ ಅಧ್ಯಕ್ಷರೆ, ನಾನು ಒಂದು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಲು ಬಸವೇಶ್ವರ ಸಹಕಾರ ಸಕ್ಕರೆ ಕಾರ್ಖಾನೆ ಬಗ್ಗೆ ವಿಷಯ ತಿಳಿಸಿದ್ದೆ.

ಅಧ್ಯಕ್ಷರು :- ಈಗ ಸಕ್ಕರೆ ಸಚಿವರು ಇಲ್ಲವಲ್ಲಾ.

ಶ್ರೀ ಜಗದೀಶ್ ಶೆಟ್ಟರ್ :- ಸಹಕಾರ ಸಚಿವರು ಇದ್ದಾರೆ. ಅವರು ಉತ್ತರ ಕೊಡಲಿ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಅಧ್ಯಕ್ಷರೆ, ನಾನು ಒಂದು ವಿಷಯವನ್ನು ಪ್ರಸ್ತಾಪ ಮಾಡಲು ಅವಕಾಶ ಕೊಡಿ ಎಂದು ತಮ್ಮನ್ನು ಕೇಳಿದ್ದೆ.

ಅಧ್ಯಕ್ಷರು :- ಹೇಳಿ. ಇಬ್ಬರೂ ಒಂದೇ ವಿಷಯ ತಾನೆ.

ಶ್ರೀ ಎಸ್.ಎಸ್. ಪಾಟೀಲ್ :- ನಾನು ಬೇರೆ ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ.

ಅಧ್ಯಕ್ಷರು :- ಆಯಿತು. ಈಗ ಮೊದಲು ವಿರೋಧ ಪಕ್ಷದ ನಾಯಕರು ಮಾತನಾಡಲಿ.